# ಕಾರ್ಯನಿರತ ಪತ್ರಕರ್ತರ ಮತ್ತು ಇತರ ವೃತ್ತಪತ್ರಿಕಾ ನೌಕರರ (ಸೇವಾ ಷರತ್ತುಗಳು) ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1955

(1955ರ ಅಧಿನಿಯಮ 45)

(20ನೇ ಡಿಸೆಂಬರ್, 1955)

ವೃತ್ತ ಪತ್ರಿಕಾ ಸಂಸ್ಥೆಗಳಲ್ಲಿ ನಿಯೋಜಿತರಾದ ಕಾರ್ಯನಿರತ ಪತ್ರಕರ್ತರ ಮತ್ತು ಇತರ ವ್ಯಕ್ತಿಗಳ ಕೆಲವು ಸೇವಾ ಷರತ್ತುಗಳನ್ನು ವಿನಿಯಮಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಆರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:

## ಅಧ್ಯಾಯ -I
## ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ:- (1) ಈ ಅಧಿನಿಯಮವನ್ನು ಕಾರ್ಯನಿರತ ಪತ್ರಕರ್ತರ ಮತ್ತು ಇತರ ವೃತ್ತಪತ್ರಿಕಾ ನೌಕರರ (ಸೇವಾ ಷರತ್ತುಗಳು) ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1955 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಲಿ" ಎಂದರೆ,-

(i) ಕಾರ್ಯನಿರತ ಪತ್ರಕರ್ತರಿಗೆ ಸಂಬಂಧಪಟ್ಟಂತೆ 9ನೇ ಪ್ರಕರಣದ ಮೇರೆಗೆ ರಚಿತವಾದ ಮಜೂರಿ ಮಂಡಲಿ, ಮತ್ತು

(ii) ಪತ್ರಕರ್ತರಲ್ಲದ ವೃತ್ತ ಪತ್ರಿಕಾ ನೌಕರರಿಗೆ ಸಂಬಂಧಪಟ್ಟಂತೆ 13ನೇ ಪ್ರಕರಣದ ಮೇರೆಗೆ ರಚಿತವಾದ ಮಜೂರಿ ಮಂಡಲಿ;

(ಬಿ) "ವೃತ್ತ ಪತ್ರಿಕೆ" ಎಂದರೆ ಸಾರ್ವಜನಿಕ ಸುದ್ದಿ ಅಥವಾ ಸಾರ್ವಜನಿಕ ಸುದ್ದಿಗಳ ಮೇಲಣ ಟೀಕೆ ಟಿಪ್ಪಣಿಗಳನ್ನು ಒಳಗೊಂಡಿರುವ ಯಾವುದೇ ಮುದ್ರಿತ ನಿಯತಕಾಲಿಕ ಪತ್ರಿಕೆ ಮತ್ತು ಇದರಲ್ಲಿ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಈ ಸಂಬಂಧದಲ್ಲಿ ರಾಜಪತ್ರದಲ್ಲಿ ಅಧಿಸೂಚಿಸಬಹುದಾದಂಥ ಇತರ ವರ್ಗದ ಮುದ್ರಿತ ನಿಯತಕಾಲಿಕ ಪತ್ರಿಕೆಯೂ ಒಳಗೊಳ್ಳುತ್ತದೆ;

(ಸಿ) "ವೃತ್ತ ಪತ್ರಿಕಾ ನೌಕರ" ಎಂದರೆ ಯಾರೇ ಕಾರ್ಯನಿರತ ಪತ್ರಕರ್ತ, ಮತ್ತು ಇದರಲ್ಲಿ ಯಾವುದೇ ವೃತ್ತ ಪತ್ರಿಕಾ ಸಂಸ್ಥೆಯಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಕೆಲಸ ಮಾಡಲು ನಿಯೋಜಿತರಾದ ಯಾರೇ ಇತರ ವ್ಯಕ್ತಿಯೂ ಒಳಗೊಳ್ಳುತ್ತಾನೆ;

(ಡಿ) "ವೃತ್ತ ಪತ್ರಿಕಾ ಸಂಸ್ಥೆ" ಎಂದರೆ ನಿಗಮಿತವಾಗಿರುವ ಅಥವಾ ಆಗಿಲ್ಲದಿರುವ ಮತ್ತು ಒಂದು ಅಥವಾ ಹೆಚ್ಚು ವೃತ್ತ ಪತ್ರಿಕೆಗಳನ್ನು ತಯಾರಿಸುವುದಕ್ಕಾಗಿ ಅಥವಾ ಪ್ರಕಟಿಸುವುದಕ್ಕಾಗಿ ಅಥವಾ ಯಾವುದೇ ವಾರ್ತಾ ಏಜೆನ್ಸಿ ಅಥವಾ ಸಿಂಡಿಕೇಟನ್ನು ನಡೆಸುವುದಕ್ಕಾಗಿ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯದ ನಿಯಂತ್ರಣದಲ್ಲಿರುವ ಒಂದು ಸಂಸ್ಥೆ, ಮತ್ತು ಅನುಸೂಚಿಯ ಅಡಿಯಲ್ಲಿ ಒಂದು ಸಂಸ್ಥೆಯಾಗಿ ನಿರ್ದಿಷ್ಟಪಡಿಸಿದ ವೃತ್ತಪತ್ರಿಕಾ ಸಂಸ್ಥೆಗಳನ್ನೂ ಒಳಗೊಳ್ಳುತ್ತದೆ.

ವಿವರಣೆ:- ಈ ಖಂಡದ ಉದ್ದೇಶಗಳಿಗಾಗಿ;-

(ಎ) ವೃತ್ತಪತ್ರಿಕಾ ಸಂಸ್ಥೆಗಳ ವಿವಿಧ ವಿಭಾಗಗಳನ್ನು, ಶಾಖೆಗಳನ್ನು ಮತ್ತು ಕೇಂದ್ರಗಳನ್ನು ಅದರ ಭಾಗಗಳೆಂದು ಪರಿಗಣಿಸತಕ್ಕದ್ದು;

(ಬಿ) ಮುದ್ರಣಾಲಯವನ್ನು, ಅದರ ಮುಖ್ಯ ಕಾರ್ಯವು, ವೃತ್ತ ಪತ್ರಿಕೆಯನ್ನು ಮುದ್ರಿಸುವುದೇ ಆಗಿದ್ದರೆ, ವೃತ್ತಪತ್ರಿಕಾ ಸಂಸ್ಥೆಯೆಂದು ಭಾವಿಸತಕ್ಕದ್ದು.

(ಡಿಡಿ) "ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರ" ಎಂದರೆ ಯಾವುದೇ ವೃತ್ತ ಪತ್ರಿಕಾ ಸಂಸ್ಥೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಕೆಲಸ ಮಾಡಲು ನಿಯೋಜಿತಗೊಂಡ ಒಬ್ಬ ವ್ಯಕ್ತಿ, ಆದರೆ ಈ ಮುಂದಿನ ಯಾರೇ ವ್ಯಕ್ತಿ ಅದರಲ್ಲಿ ಒಳಗೊಳ್ಳುವುದಿಲ್ಲ-

(i) ಕಾರ್ಯನಿರತ ಪತ್ರಕರ್ತ; ಅಥವಾ

(ii) ಮುಖ್ಯವಾಗಿ ವ್ಯವಸ್ಥಾಪನ ಅಥವಾ ಆಡಳಿತಾತ್ಮಕ ಸ್ಥಾನದಲ್ಲಿ ನಿಯೋಜಿತನಾದ ವ್ಯಕ್ತಿ; ಅಥವಾ

(iii) ಮೇಲ್ವಿಚಾರಣಾ ಸ್ಥಾನದಲ್ಲಿ ನಿಯೋಜಿತನಾಗಿದ್ದು, ತನ್ನ ಪದಕ್ಕೆ ಸಂಬಂಧಿಸಿದ ಕರ್ತವ್ಯಗಳ ಸ್ವರೂಪದಿಂದಾಗಲಿ ಅಥವಾ ಅವನಲ್ಲಿ ನಿಹಿತಗೊಳಿಸಲಾದ ಅಧಿಕಾರಗಳ ಕಾರಣದಿಂದಾಗಲಿ ಮುಖ್ಯವಾಗಿ ವ್ಯವಸ್ಥಾಪಕ ಸ್ವರೂಪದ ಪ್ರಕಾರ್ಯಗಳನ್ನು ನೆರವೇರಿಸುವ ವ್ಯಕ್ತಿ;

(ಇ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದದು.

(ಇಇ) "ನ್ಯಾಯಾಧಿಕರಣ" ಎಂದರೆ;-

(i) ಕಾರ್ಯನಿರತ ಪತ್ರಕರ್ತರಿಗೆ ಸಂಬಂಧಪಟ್ಟಂತೆ, 13 ಎಎ ಪ್ರಕರಣದ ಮೇರೆಗೆ ರಚಿತವಾದ ನ್ಯಾಯಾಧಿಕರಣ; ಮತ್ತು

(ii) ಪತ್ರಕರ್ತರಲ್ಲದ ವೃತ್ತ ಪತ್ರಿಕಾ ನೌಕರರಿಗೆ ಸಂಬಂಧಪಟ್ಟಂತೆ, 13 ಡಿಡಿ ಪ್ರಕರಣದ ಮೇರೆಗೆ ರಚಿತವಾದ ನ್ಯಾಯಾಧಿಕರಣ;

(ಇಇಇ) "ಮಜೂರಿಗಳು" ಎಂದರೆ ಒಬ್ಬ ವೃತ್ತಪತ್ರಿಕಾ ನೌಕರನಿಗೆ, ಅವನ ಉದ್ಯೋಗಕ್ಕೆ ಅಥವಾ ಅಂಥ ಉದ್ಯೋಗದಲ್ಲಿ ಮಾಡಿದ ಕೆಲಸಕ್ಕೆ ಸಂಬಂಧಪಟ್ಟಂತೆ, ಉದ್ಯೋಗದ ನಿಬಂಧನೆಗಳು ವ್ಯಕ್ತವಾಗಿದ್ದು ಅಥವಾ ಇಂಗಿತವಾಗಿದ್ದು ಆ ನಿಬಂಧನೆಗಳನ್ನು ಈಡೇರಿಸಿದ್ದರೆ, ಹಣದ ರೂಪದಲ್ಲಿ ವ್ಯಕ್ತಪಡಿಸಬಹುದಾದ, ಸಂದಾಯ ಮಾಡಬಹುದಾದ, ಎಲ್ಲ ಸಂಭಾವನೆ, ಮತ್ತು-

(i) ವೃತ್ತಪತ್ರಿಕಾ ನೌಕರನು ತತ್ಕಾಲದಲ್ಲಿ ಹಕ್ಕುಳ್ಳವನಾಗಿರುವಂಥ ಭತ್ಯೆಗಳನ್ನು (ತುಟ್ಟಿಭತ್ಯೆ ಸೇರಿ);

(ii) ಯಾವುದೇ ವಸತಿ ಸೌಲಭ್ಯದ ಅಥವಾ ವಿದ್ಯುತ್, ನೀರು ಪೂರೈಕೆಯ ವೈದ್ಯಕೀಯ ಉಪಚಾರದ ಅಥವಾ ಇತರ ಸೌಕರ್ಯಗಳ ಅಥವಾ ಯಾವುದೇ ಸೇವೆಯ ಅಥವಾ ಆಹಾರ ಧಾನ್ಯಗಳ ಅಥವಾ ಇತರ ವಸ್ತುಗಳ ಯಾವುದೇ ರಿಯಾಯಿತಿ ಸರಬರಾಜಿನ ಮೌಲ್ಯವನ್ನು;

(iii) ಯಾವುದೇ ಪ್ರಯಾಣ ರಿಯಾಯಿತಿಯನ್ನು

ಒಳಗೊಳ್ಳುತ್ತದೆ,

ಆದರೆ.

(ಎ) ಯಾವುದೇ ಬೋನಸ್;

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಯಾವುದೇ ಪಿಂಚಣಿ ನಿಧಿಗೆ ಅಥವಾ ಭವಿಷ್ಯ ನಿಧಿಗೆ ಅಥವಾ ವೃತ್ತಪತ್ರಿಕಾ ನೌಕರನ ಪ್ರಯೋಜನಕ್ಕಾಗಿ ನಿಯೋಜಕನು ಸಂದಾಯ ಮಾಡಿದ ಅಥವಾ ಸಂದಾಯ ಮಾಡಬಹುದಾದ ಯಾವುದೇ ವಂತಿಗೆಯು;

(ಸಿ) ಅವನ ಸೇವೆಯು ಮುಕ್ತಾಯವಾದಾಗ ಸಂದಾಯ ಮಾಡಬಹುದಾದ ಯಾವುದೇ ಉಪದಾನವು,

ಒಳಗೊಳ್ಳುವುದಿಲ್ಲ.

ವಿವರಣೆ: ಈ ಖಂಡದಲ್ಲಿ, "ಮಜೂರಿಗಳು" ಪದದಲ್ಲಿ ಕಾಲಕಾಲಕ್ಕೆ ನಿಗದಿಪಡಿಸಿದ ಯಾವುದೇ ವಿವರಣೆಯ ಹೊಸ ಭತ್ಯೆಗಳೂ ಸಹ ಯಾವುದಾದರೂ ಇದ್ದರೆ, ಒಳಗೊಳ್ಳತಕ್ಕದ್ದು ;

(ಎಫ್) "ಕಾರ್ಯನಿರತ ಪತ್ರಕರ್ತ" ಎಂದರೆ ಯಾರ ಪ್ರಧಾನ ವೃತ್ತಿಯು ಪತ್ರಕರ್ತನ ವೃತ್ತಿಯಾಗಿರುವುದೋ ಮತ್ತು ಯಾರು ಒಂದು ಅಥವಾ ಹೆಚ್ಚು ವೃತ್ತಪತ್ರಿಕಾ ಸಂಸ್ಥೆಗಳಲ್ಲಿ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಪೂರ್ಣಕಾಲಿಕವಾಗಿ ಅಥವಾ ಅಂಶಕಾಲಿಕವಾಗಿ ನಿಯೋಜಿತನಾಗಿರುವನೋ ಆ ವ್ಯಕ್ತಿ ಮತ್ತು ಇದರಲ್ಲಿ ಸಂಪಾದಕ, ಅಗ್ರ ಲೇಖನಕಾರ, ಸುದ್ದಿ ಸಂಪಾದಕ, ಉಪ-ಸಂಪಾದಕ, ವಿಶೇಷ ಲೇಖನಕಾರ, ಪ್ರತಿ ಪರಿಶೀಲಕ, ವರದಿಗಾರ, ಭಾತ್ಮಿದಾರ, ವ್ಯಂಗ ಚಿತ್ರಕಾರ, ವೃತ್ತ ಪತ್ರಿಕಾ ಛಾಯಾಗ್ರಾಹಕ ಮತ್ತು ಕರಡು ತಿದ್ದುವವನು-ಇವರು ಒಳಗೊಂಡಿರುತ್ತಾರೆ. ಆದರೆ, ಈ ಮುಂದಿನ ಯಾರೇ ವ್ಯಕ್ತಿ ಇದರಲ್ಲಿ ಒಳಗೊಳ್ಳುವುದಿಲ್ಲ.

(i) ಮುಖ್ಯವಾಗಿ ವ್ಯವಸ್ಥಾಪನದ ಅಥವಾ ಆಡಳಿತಾತ್ಮಕ ಸ್ಥಾನದಲ್ಲಿ ನಿಯೋಜಿತನಾದವನ್ನು ಅಥವಾ

(ii) ಮೇಲ್ವಿಚಾರಣಾ ಸ್ಥಾನದಲ್ಲಿ ನಿಯೋಜಿತನಾಗಿದ್ದು ತನ್ನ ಪದಕ್ಕೆ ಸಂಬಂಧಿಸಿದ ಕರ್ತವ್ಯಗಳ ಸ್ವರೂಪದಿಂದಾಗಲಿ ಅಥವಾ ಅವನಲ್ಲಿ ನಿಹಿತಗೊಳಿಸಲಾದ ಅಧಿಕಾರಗಳ ಕಾರಣದಿಂದಾಗಲಿ, ಮುಖ್ಯವಾಗಿ ವ್ಯವಸ್ಥಾಪಕ ಸ್ವರೂಪದ ಪ್ರಕಾರ್ಯಗಳನ್ನು ನೆರವೇರಿಸುವ ವ್ಯಕ್ತಿ;

(ಜಿ) ಈ ಅಧಿನಿಯಮದಲ್ಲಿ ಉಪಯೋಗಿಸಿದ ಆದರೆ ಪರಿಭಾಷಿಸಿರದ ಮತ್ತು ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) ರಲ್ಲಿ ಪರಿಭಾಷಿಸಿರುವ ಎಲ್ಲ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ -II

## ಕಾರ್ಯನಿರತ ಪತ್ರಕರ್ತರು

3. 1947ರ 14ನೇ ಅಧಿನಿಯಮವನ್ನು ಕಾರ್ಯನಿರತ ಪತ್ರಕರ್ತರಿಗೆ ಅನ್ವಯಿಸುವುದು:- (1)ತತ್ಕಾಲದಲ್ಲಿ ಜಾರಿಯಲ್ಲಿರುವ ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ ಉಪಬಂಧಗಳು, (2) ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮಾರ್ಪಾಟಿಗೊಳಪಟ್ಟು, ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಬರುವ ಕೆಲಸಗಾರರಿಗೆ, ಅಥವಾ ಅವರಿಗೆ ಸಂಬಂಧಿಸಿದಂತೆ ನೌಕರರಿಗೆ ಅನ್ವಯವಾಗುವಂತೆಯೇ ಕಾರ್ಯನಿರತ ಪತ್ರಕರ್ತರಿಗೆ ಅಥವಾ ಅವರಿಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದು.

(2) ಮೇಲೆ ಹೇಳಿದ ಅಧಿನಿಯಮದ 25 ಎಫ್ ಪ್ರಕರಣವನ್ನು ಕಾರ್ಯನಿರತ ಪತ್ರಕರ್ತರಿಗೆ ಅನ್ವಯಿಸುವಲ್ಲಿ, ಆ ಪ್ರಕರಣದ (ಎ) ಖಂಡದಲ್ಲಿ ಒಬ್ಬ ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕುವುದಕ್ಕೆ ಸಂಬಂಧಪಟ್ಟಂತೆ ಉಲ್ಲೇಖಿಸಲಾದ ನೋಟೀಸಿನ ಅವಧಿಗೆ ಬದಲಾಗಿ ಒಬ್ಬ ಕಾರ್ಯನಿರತ ಪತ್ರಕರ್ತನನ್ನು ಕೆಲಸದಿಂದ ತೆಗೆದುಹಾಕುವುದಕ್ಕೆ ಸಂಬಂಧಪಟ್ಟಂತೆ ಈ ಮುಂದಿನ ನೋಟೀಸಿನ ಅವಧಿಗಳನ್ನು ಪ್ರತ್ಯಾಯೋಜಿಸಿದ್ದರೆ ಹೇಗೋ ಹಾಗೆ ಆ ಪ್ರಕರಣವನ್ನು ಅರ್ಥೈಸತಕ್ಕದ್ದು, ಎಂದರೆ:-

(ಎ) ಒಬ್ಬ ಸಂಪಾದಕನ ಸಂದರ್ಭದಲ್ಲಿ ಆರು ತಿಂಗಳು; ಮತ್ತು

(ಬಿ) ಯಾರೇ ಇತರ ಕಾರ್ಯನಿರತ ಪತ್ರಕರ್ತನ ಸಂದರ್ಭದಲ್ಲಿ ಮೂರು ತಿಂಗಳು.

4. ಕೆಲಸದಿಂದ ತೆಗೆದುಹಾಕುವ ಕೆಲವು ಪ್ರಕರಣಗಳಿಗೆ ಸಂಬಂಧಪಟ್ಟಂತೆ ವಿಶೇಷ ಉಪಬಂಧಗಳು:- 14ನೇ ಜುಲೈ, 1954 ಮತ್ತು 12ನೇ ಮಾರ್ಚ್, 1955ರ ನಡುವಣ ಯಾವುದೇ ಸಮಯದಲ್ಲಿ, ಯಾರೇ ಕಾರ್ಯನಿರತ ಪತ್ರಕರ್ತನನ್ನು ಕೆಲಸದಿಂದ ತೆಗೆದುಹಾಕಿದ್ದಾಗ, ಅವನು ನಿಯೋಜಕನಿಂದ ಈ ಮುಂದಿನವುಗಳನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು-

(ಎ) ಪತ್ರಕರ್ತನನ್ನು ಹಾಗೆ ಕೆಲಸದಿಂದ ತೆಗೆದುಹಾಕುವ ಮುಂಚೆ, ಒಂದು ತಿಂಗಳ ಲಿಖಿತ ನೋಟೀಸನ್ನು ಅವನಿಗೆ ನೀಡಿದ್ದ ಹೊರತು, ಅವನನ್ನು ಕೆಲಸದಿಂದ ತೆಗೆದುಹಾಕುವುದಕ್ಕೆ ನಿಕಟಪೂರ್ವದಲ್ಲಿ ಅವನು ಹಕ್ಕುಳ್ಳವನಾಗಿದ್ದಂಥ ಮಜೂರಿದರದಲ್ಲಿ ಒಂದು ತಿಂಗಳ ಮಜೂರಿ; ಮತ್ತು

(ಬಿ) ಆ ನಿಯೋಜಕನ ಅಧೀನದಲ್ಲಿ ಸೇವೆಯು ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕೆ ಅಥವಾ ಆರು ತಿಂಗಳಿಗಿಂತ ಹೆಚ್ಚಿನ ಅದರ ಯಾವುದೇ ಭಾಗಕ್ಕೆ ಹದಿನೈದು ದಿನಗಳ ಸರಾಸರಿ ವೇತನಕ್ಕೆ ಸಮಾನವಾದ ನಷ್ಟ ಪರಿಹಾರ.

5. ಉಪದಾನ ಸಂದಾಯ:- (1) (ಎ) ಯಾರೇ ಕಾರ್ಯನಿರತ ಪತ್ರಕರ್ತನು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಅಥವಾ ಅದರ ತರುವಾಯ ಯಾವುದೇ ವೃತ್ತಪತ್ರಿಕೆಯ ಸಂಸ್ಥೆಯಲ್ಲಿ ಮೂರು ವರ್ಷಗಳಿಗೆ ಕಡಿಮೆಯಿಲ್ಲದಷ್ಟು ನಿರಂತರ ಸೇವೆಯಲ್ಲಿದ್ದರೆ; ಮತ್ತು

(i) ಶಿಸ್ತಿನ ಕ್ರಮದ ಮೂಲಕ ವಿಧಿಸಲಾದ ದಂಡನೆಯ ಹೊರತಾದ ಯಾವುದೇ ಕಾರಣಕ್ಕಾಗಿ, ಆ ವೃತ್ತಪತ್ರಿಕಾ ಸಂಸ್ಥೆಯ ಸಂಬಂಧದಲ್ಲಿ ನಿಯೋಜಕನು ಅವನ ಸೇವೆಯನ್ನು ಕೊನೆಗೊಳಿಸಿದ್ದರೆ; ಅಥವಾ

(ii) ಅವನು ತನ್ನ ವಯೋ ನಿವೃತ್ತಿಯ ವಯಸ್ಸನ್ನು ತಲುಪಿದ ಮೇಲೆ ಸೇವೆಯಿಂದ ನಿವೃತ್ತನಾದರೆ ; ಅಥವಾ

(ಬಿ) ಯಾರೇ ಕಾರ್ಯನಿರತ ಪತ್ರಕರ್ತನು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲಾಗಲಿ ಅಥವಾ ಆ ತರುವಾಯವಾಗಲಿ ಯಾವುದೇ ವೃತ್ತಪತ್ರಿಕಾ ಸಂಸ್ಥೆಯಲ್ಲಿ ಹತ್ತು ವರ್ಷಗಳಿಗೆ ಕಡಿಮೆಯಿಲ್ಲದಷ್ಟು ನಿರಂತರ ಸೇವೆಯಲ್ಲಿದ್ದು, ಅವನು 1ನೇ ಜುಲೈ, 1961 ರಂದು ಅಥವಾ ಆ ತರುವಾಯ ತನ್ನ ಆತ್ಮಸಾಕ್ಷಿಯ ಕಾರಣದ ಹೊರತಾದ ಇನ್ನಾವುದೇ ಕಾರಣದ ಮೇಲೆ ಆ ವೃತ್ತಪತ್ರಿಕಾ ಸಂಸ್ಥೆಯಲ್ಲಿನ ಸೇವೆಗೆ ಸ್ವಯಿಚ್ಛೆಯಿಂದ ರಾಜೀನಾಮೆ ನೀಡಿದರೆ; ಅಥವಾ

(ಸಿ) ಯಾರೇ ಕಾರ್ಯನಿರತ ಪತ್ರಕರ್ತನು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲಾಗಲೀ ಅಥವಾ ತರುವಾಯವಾಗಲೀ ಯಾವುದೇ ವೃತ್ತಪತ್ರಿಕಾ ಸಂಸ್ಥೆಯಲ್ಲಿ ಮೂರು ವರ್ಷಗಳಿಗೆ ಕಡಿಮೆಯಿಲ್ಲದಷ್ಟು ನಿರಂತರ ಸೇವೆಯಲ್ಲಿದ್ದು, ಅವನು ಜುಲೈ 1, 1961 ರಂದು ಅಥವಾ ಆ ತರುವಾಯ ತನ್ನ ಆತ್ಮಸಾಕ್ಷಿಯ ಕಾರಣದ ಮೇಲೆ ಆ ವೃತ್ತಪತ್ರಿಕಾ ಸಂಸ್ಥೆಯಲ್ಲಿನ ಸೇವೆಗೆ ಸ್ವಯಿಚ್ಛೆಯಿಂದ ರಾಜೀನಾಮೆ ನೀಡಿದರೆ; ಅಥವಾ

(ಡಿ) ಯಾರೇ ಕಾರ್ಯನಿರತ ಪತ್ರಕರ್ತನು ಯಾವುದೇ ವೃತ್ತ ಪತ್ರಿಕಾ ಸಂಸ್ಥೆಯ ಸೇವೆಯಲ್ಲಿರುವಾಗಲೇ ಮೃತಪಟ್ಟರೆ

-ಕಾರ್ಯನಿರತ ಪತ್ರಕರ್ತನಿಗೆ ಅಥವಾ ಅವನು ಮರಣ ಹೊಂದಿದ ಸಂದರ್ಭದಲ್ಲಿ, ಸಂದರ್ಭಾನುಸಾರ ಅವನ ನಾಮನಿರ್ದೇಶಿತನಿಗೆ ಅಥವಾ ನಾಮನಿರ್ದೇಶಿತರಿಗೆ ಅಥವಾ ಕಾರ್ಯನಿರತ ಪತ್ರಕರ್ತನು ಮರಣ ಹೊಂದಿದ ಸಮಯದಲ್ಲಿ ಯಾವುದೇ ನಾಮನಿರ್ದೇಶನವು ಜಾರಿಯಲ್ಲಿರದಿದ್ದರೆ, ಅವನ ಕುಟುಂಬಕ್ಕೆ ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ (1947ರ

14) ಮೇರೆಗೆ ಒದಗಿಬರುವ ಯಾವುದೇ ಪ್ರಯೋಜನಗಳಿಗೆ ಅಥವಾ ಹಕ್ಕುಗಳಿಗೆ ಬಾಧಕವಾಗದಂತೆ, ಸೇವೆಯು ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕೆ ಅಥವಾ ಅದರ ಆರು ತಿಂಗಳ ಹೆಚ್ಚಿನ ಅದರ ಯಾವುದೇ ಭಾಗಕ್ಕೆ ಹದಿನೈದು ದಿನಗಳ ಸರಾಸರಿ ವೇತನಕ್ಕೆ ಸಮನಾಗಿರತಕ್ಕ ಉಪದಾನವನ್ನು ಆ ಸಂಸ್ಥೆಗೆ ಸಂಬಂಧಪಟ್ಟಂತೆ ನಿಯೋಜಕನು ಅಂಥ ಸೇವಾ ಸಮಾಪ್ತಿ, ನಿವೃತ್ತಿ, ರಾಜೀನಾಮೆ ಅಥವಾ ಮರಣ-ಇವು ಸಂಭವಿಸಿದ ತರುವಾಯ ಸಂದಾಯ ಮಾಡತಕ್ಕದ್ದು:

ಪರಂತು, (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಕಾರ್ಯನಿರತ ಪತ್ರಕರ್ತನ ಸಂದರ್ಭದಲ್ಲಿ, ಅವನಿಗೆ ಸಂದಾಯ ಮಾಡತಕ್ಕ ಉಪದಾನದ ಒಟ್ಟು ಮೊತ್ತವು ಹನ್ನೆರಡೂವರೆ ತಿಂಗಳ ಸರಾಸರಿ ವೇತನವನ್ನು ಮೀರತಕ್ಕದ್ದಲ್ಲ;

ಮತ್ತೂ ಪರಂತು, ಈ ಅಧಿನಿಯಮವು ಪ್ರಾರಂಭವಾಗುವ ನಿಕಟಪೂರ್ವದ ಹನ್ನೆರಡು ತಿಂಗಳುಗಳ ಅವಧಿಯ ಯಾವುದೇ ದಿನದಂದು ಆರಕ್ಕಿಂತ ಹೆಚ್ಚಿಲ್ಲದಷ್ಟು ಕಾರ್ಯನಿರತ ಪತ್ರಕರ್ತರು ನಿಯೋಜಿತರಾಗಿದ್ದಂಥ ಯಾವುದೇ ವೃತ್ತ ಪತ್ರಿಕಾ ಸಂಸ್ಥೆಯಲ್ಲಿ ಒಬ್ಬ ಕಾರ್ಯನಿರತ ಪತ್ರಕರ್ತನು ನಿಯೋಜಿತನಾಗಿರುವಲ್ಲಿ, ಅಂಥ ಪ್ರಾರಂಭಕ್ಕೆ ಮುಂಚಿನ ಸೇವೆಯ ಯಾವುದೇ ಅವಧಿಗಾಗಿ ಯಾವುದೇ ಅಂಥ ವೃತ್ತಪತ್ರಿಕಾ ಸಂಸ್ಥೆಯಲ್ಲಿ ನಿಯೋಜಿತನಾಗಿರುವ ಒಬ್ಬ ಕಾರ್ಯನಿರತ ಪತ್ರಕರ್ತನಿಗೆ ಸಂದಾಯ ಮಾಡಬೇಕಾದ ಉಪದಾನವು, ಸೇವೆಯು ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕೆ ಅಥವಾ ಆರು ತಿಂಗಳಿಗಿಂತ ಹೆಚ್ಚಿನ ಅದರ ಯಾವುದೇ ಭಾಗಕ್ಕೆ ಹದಿನೈದು ದಿನಗಳ ಸರಾಸರಿ ವೇತನಕ್ಕೆ ಸಮನಾಗಿರತಕ್ಕದ್ದಲ್ಲ, ಆದರೆ, ಅದು-

(ಎ) ಅಂಥ ಹಿಂದಿನ ಸೇವಾವಧಿಯು ಐದು ವರ್ಷಗಳಿಗೆ ಮೀರದಿರುವಲ್ಲಿ, ಸೇವೆಯು ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕೆ ಅಥವಾ ಆರು ತಿಂಗಳಿಗಿಂತ ಹೆಚ್ಚಿನ ಅದರ ಯಾವುದೇ ಭಾಗಕ್ಕೆ ಮೂರು ದಿನಗಳ ಸರಾಸರಿ ವೇತನ;

(ಬಿ) ಅಂಥ ಹಿಂದಿನ ಸೇವಾವಧಿಯು ಐದು ವರ್ಷಗಳಿಗೆ ಮೀರಿರುವಲ್ಲಿ ಆದರೆ ಹತ್ತು ವರ್ಷಗಳಿಗೆ ಮೀರದಿರುವಲ್ಲಿ ಸೇವೆಯು ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕೆ ಅಥವಾ ಆರು ತಿಂಗಳಿಗಿಂತ ಹೆಚ್ಚಿನ ಅದರ ಯಾವುದೇ ಭಾಗಕ್ಕೆ ಐದು ದಿನಗಳ ಸರಾಸರಿ ವೇತನ; ಮತ್ತು

(ಸಿ) ಅಂಥ ಹಿಂದಿನ ಸೇವಾವಧಿಯು ಹತ್ತು ವರ್ಷಗಳಿಗೆ ಮೀರಿರುವಲ್ಲಿ ಸೇವೆಯು ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕೆ ಅಥವಾ ಆರು ತಿಂಗಳಿಗಿಂತ ಹೆಚ್ಚಿನ ಅದರ ಯಾವುದೇ ಭಾಗಕ್ಕೆ ಏಳು ದಿನಗಳ ಸರಾಸರಿ ವೇತನ

-ಇವುಗಳಿಗೆ ಸಮನಾಗಿರತಕ್ಕದ್ದು.

ವಿವರಣೆ:- ಈ ಉಪ-ಪ್ರಕರಣ ಮತ್ತು 17ನೇ ಪ್ರಕರಣದ (1) ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ "ಕುಟುಂಬ" ಎಂದರೆ,

(i) ಕಾರ್ಯನಿರತ ಪುರುಷ ಪತ್ರಕರ್ತನ ಸಂದರ್ಭದಲ್ಲಿ, ಅವನ ವಿಧವೆ, ಅವನ ವಿವಾಹಿತ ಅಥವಾ ಅವಿವಾಹಿತ ಮಕ್ಕಳು ಮತ್ತು ಅವನ ಮೇಲೆ ಅವಲಂಬಿತರಾದ ತಂದೆತಾಯಿ ಮತ್ತು ಅವನ ಮೃತ ಪುತ್ರನ ವಿಧವೆ ಮತ್ತು ಮಕ್ಕಳು:

ಪರಂತು, ಅವನ ಮರಣದ ಸಮಯದಲ್ಲಿ ವಿಧವೆಯು ಅವನಿಂದ ಕಾನೂನು ಸಮ್ಮತ ರೀತಿಯಲ್ಲಿ ಪೋಷಿತಳಾಗಲು ಹಕ್ಕುಳ್ಳವಳಾಗಿಲ್ಲದಿದ್ದರೆ ಅವಳನ್ನು ಆ ಕಾರ್ಯ ನಿರತ ಪತ್ರಕರ್ತನ ಕುಟುಂಬದ ಸದಸ್ಯೆಯೆಂದು ಭಾವಿಸತಕ್ಕದ್ದಲ್ಲ;

(ii) ಕಾರ್ಯನಿರತ ಮಹಿಳಾ ಪತ್ರಕರ್ತೆಯ ಸಂದರ್ಭದಲ್ಲಿ, ಅವಳ ಪತಿ, ಅವಳ ವಿವಾಹಿತ ಅಥವಾ ಅವಿವಾಹಿತ ಮಕ್ಕಳು ಮತ್ತು ಕಾರ್ಯನಿರತ ಪತ್ರಕರ್ತೆಯ ಅಥವಾ ಅವಳ ಪತಿಯ ಅವಲಂಬಿತ ತಾಯಿ ತಂದೆಯರು ಮತ್ತು ಅವಳ ಮೃತ ಮಗನ ವಿಧವೆ ಹಾಗೂ ಮಕ್ಕಳು :

ಪರಂತು, ಕಾರ್ಯನಿರತ ಪತ್ರಕರ್ತೆಯು ತನ್ನ ಪತಿಯನ್ನು ಆ ಕುಟುಂಬದಿಂದ ಹೊರತುಪಡಿಸುವ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದ್ದರೆ, ಆ ಪತಿ ಹಾಗೂ ಅವನ ಅವಲಂಬಿತ ತಂದೆತಾಯಿಗಳು ಆ ಕಾರ್ಯನಿರತ ಪತ್ರಕರ್ತೆಯ ಕುಟಂಬದ ಒಂದು ಭಾಗವಾಗಿರುವುದಾಗಿ ಭಾವಿಸತಕ್ಕದ್ದಲ್ಲ,

- ಮತ್ತು ಮೇಲ್ಕಂಡ ಎರಡೂ ಸಂದರ್ಭಗಳ ಪೈಕಿ ಯಾವುದೇ ಒಂದು ಸಂದರ್ಭದಲ್ಲಿ, ಕಾರ್ಯನಿರತ ಪತ್ರಕರ್ತನ ಅಥವಾ ಕಾರ್ಯನಿರತ ಪತ್ರಕರ್ತನ ಮೃತಪುತ್ರನ ಮಗುವನ್ನು ಮತ್ತೊಬ್ಬ ವ್ಯಕ್ತಿಯು ದತ್ತು ತೆಗೆದುಕೊಂಡಿದ್ದರೆ, ಮತ್ತು ದತ್ತು ತೆಗೆದುಕೊಂಡವನ ವೈಯಕ್ತಿಕ ಕಾನೂನಿನ ಮೇರೆಗೆ ದತ್ತಕವನ್ನು ಕಾನೂನುಬದ್ಧವಾಗಿ ಮಾನ್ಯಮಾಡಿದ್ದರೆ ಅಂಥ ಮಗುವನ್ನು ಕಾರ್ಯನಿರತ ಪತ್ರಕರ್ತನ ಕುಟುಂಬದ ಸದಸ್ಯನೆಂದು ಪರಿಗಣಿಸತಕ್ಕದ್ದಲ್ಲ.

(2) ಒಬ್ಬ ಕಾರ್ಯನಿರತ ಪತ್ರಕರ್ತನು ಮನಸಾಕ್ಷಿಯ ಕಾರಣದ ಮೇಲೆ ಯಾವುದೇ ವೃತ್ತಪತ್ರಿಕಾ ಸಂಸ್ಥೆಯಲ್ಲಿನ ಸೇವೆಗೆ ಸ್ವಯಿಚ್ಛೆಯಿಂದ ರಾಜೀನಾಮೆಯನ್ನು ಕೊಟ್ಟಿರುವನೇ ಎಂಬ ಯಾವುದೇ ವಿವಾದವನ್ನು ಕೈಗಾರಿಕಾ ವಿವಾದಗಳ ಅಧಿನಿಯಮ, 947 (1947ರ 14) ಅಥವಾ ಕೈಗಾರಿಕಾ ವಿವಾದಗಳ ತನಿಖೆ ಹಾಗೂ ಇತ್ಯರ್ಥಕ್ಕೆ ಸಂಬಂಧಪಟ್ಟಂತೆ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರುವ, ಯಾವುದೇ ಸಂವಾದಿ ಕಾನೂನಿನ ಅರ್ಥವ್ಯಾಪ್ತಿಯೊಳಗೆ ಬರುವ ಒಂದು ಕೈಗಾರಿಕಾ ವಿವಾದವೆಂದು ಭಾವಿಸತಕ್ಕದ್ದು;

(3) ಒಬ್ಬ ನಾಮನಿರ್ದೇಶಿತನು ಅಪ್ರಾಪ್ತವಯಸ್ಕನಾಗಿದ್ದರೆ ಮತ್ತು (1)ನೇ ಉಪ-ಪ್ರಕರಣದ ಮೇರೆಗಿನ ಉಪದಾನವನ್ನು ಅಪ್ರಾಪ್ತ ವಯಸ್ಕನಾಗಿರುವಾಗಲೇ ಅವನು ಸಂದಾಯ ಮಾಡಬೇಕಾಗಿ ಬಂದರೆ, ಆಗ 5 ಎ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ವ್ಯಕ್ತಿಗೆ ಅದನ್ನು ಸಂದಾಯ ಮಾಡತಕ್ಕದ್ದು.

ಪರಂತು, ಅಂಥ ವ್ಯಕ್ತಿಯಿಲ್ಲದಿರುವಲ್ಲಿ ಸಕ್ಷಮ ನ್ಯಾಯಾಲಯವು ನೇಮಕ ಮಾಡಿದ, ಅಪ್ರಾಪ್ತ ವಯಸ್ಕನ ಸ್ವತ್ತಿನ ಯಾರೇ ಪಾಲಕನಿಗೆ ಅದನ್ನು ಸಂದಾಯ ಮಾಡತಕ್ಕದ್ದು, ಅಥವಾ ಅಂಥ ಪಾಲಕನನ್ನು ನೇಮಕ ಮಾಡಿರದಿದ್ದಲ್ಲಿ, ಆ ಅಪ್ರಾಪ್ತ ವಯಸ್ಕನ ತಂದೆ ಅಥವಾ ತಾಯಿಗೆ, ಅಥವಾ ಆ ತಂದೆ ತಾಯಿ ಇಬ್ಬರು ಜೀವಂತವಾಗಿರದಿದ್ದರೆ, ಆ ಅಪ್ರಾಪ್ತ ವಯಸ್ಕನ ಯಾರೇ ಇತರ ಪಾಲಕನಿಗೆ ಸಂದಾಯ ಮಾಡತಕ್ಕದ್ದು:

ಮತ್ತೂ ಪರಂತು, ಉಪದಾನವನ್ನು ಇಬ್ಬರು ಅಥವಾ ಅದಕ್ಕೂ ಹೆಚ್ಚು ನಾಮನಿರ್ದೇಶಿತರಿಗೆ ಸಂದಾಯ ಮಾಡಬೇಕಾಗಿರುವಲ್ಲಿ, ಮತ್ತು ಆ ಇಬ್ಬರಲ್ಲಿ ಯಾರಾದರೂ ಒಬ್ಬರು ಅಥವಾ ಹೆಚ್ಚು ನಾಮನಿರ್ದೇಶಿತರ ಪೈಕಿ ಯಾರಾದರೂ ಒಬ್ಬರು ಮೃತಪಟ್ಟರೆ, ಆಗ ಆ ಉಪದಾನವನ್ನು ಬದುಕಿ ಉಳಿದಿರುವ ನಾಮನಿರ್ದೇಶಿತ ಅಥವಾ ನಾಮನಿರ್ದೇಶಿತರಿಗೆ ಸಂದಾಯ ಮಾಡತಕ್ಕದ್ದು.

5ಎ. ಕಾರ್ಯನಿರತ ಪತ್ರಕರ್ತನು ನಾಮನಿರ್ದೇಶನ ಮಾಡುವುದು:- (1) ಒಬ್ಬ ಕಾರ್ಯನಿರತ ಪತ್ರಕರ್ತನಿಗೆ ಸಂದಾಯ ಮಾಡಬೇಕಾದ ಯಾವುದೇ ಉಪದಾನಕ್ಕೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಮರಣ ಶಾಸನಿಕ ಅಥವಾ ಅನ್ಯಥಾ ಮಾಡಲಾದ ಯಾವುದೇ ವ್ಯವಸ್ಥೆಯಲ್ಲಿ ಏನೇ ಇದ್ದರೂ, ಆ ಕಾರ್ಯನಿರತ ಪತ್ರಕರ್ತನಿಗೆ ತತ್ಕಾಲದಲ್ಲಿ ಬಾಕಿ ಇರುವ ಉಪದಾನದ ಸಂದಾಯವನ್ನು ಸ್ವೀಕರಿಸುವ ಹಕ್ಕನ್ನು ಯಾರೇ ವ್ಯಕ್ತಿಗೆ ಪ್ರದಾನ ಮಾಡುವುದಾಗಿ ನಿಯಮಿಸಲಾದ ರೀತಿಯಲ್ಲಿ ಮಾಡಲಾದ ನಾಮನಿರ್ದೇಶನದಿಂದ ತಾತ್ಪರ್ಯವಾಗುವುದಾಗಿ, ಆ ನಾಮನಿರ್ದೇಶಿತನು ಕಾರ್ಯನಿರತ ಪತ್ರಕರ್ತನ ಮರಣದ ತರುವಾಯ ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಆ ನಾಮನಿರ್ದೇಶನವನ್ನು ನಿಯಮಿಸಲಾದ ರೀತಿಯಲ್ಲಿ ವ್ಯತ್ಯಸ್ಥಗೊಳಿಸಿದ್ದ ಅಥವಾ ರದ್ದುಗೊಳಿಸಿದ್ದ ಹೊರತು ಉಳಿದ ಎಲ್ಲಾ ವ್ಯಕ್ತಿಗಳನ್ನು ಹೊರತುಪಡಿಸಿ ಉಪದಾನದ ಸಂಬಂಧದಲ್ಲಿ ಬಾಕಿ ಇರುವ ಮೊತ್ತವನ್ನು ಅವನಿಗೆ ಸಂದಾಯ ಮಾಡತಕ್ಕದ್ದು.

(2) ನಾಮನಿರ್ದೇಶನವನ್ನು ಮಾಡುವ ಕಾರ್ಯನಿರತ ಪತ್ರಕರ್ತನಿಗಿಂತ ಮೊದಲೇ ನಾಮನಿರ್ದೇಶಿತನು ಮೃತನಾದರೆ ಅಥವಾ ಇಬ್ಬರು ಅಥವಾ ಹೆಚ್ಚು ನಾಮನಿರ್ದೇಶಿತರು ಇದ್ದು ಆ ಎಲ್ಲಾ ನಾಮನಿರ್ದೇಶಿತರು ಮೊದಲೇ ಮೃತರಾದರೆ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ನಾಮನಿರ್ದೇಶನವು ಶೂನ್ಯವಾಗತಕ್ಕದ್ದು.

(3) ನಾಮನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿದ್ದರೆ ಮತ್ತು ಅವನ ಅಪ್ರಾಪ್ತ ವಯಸ್ಕತೆಯ ಅವಧಿಯಲ್ಲಿ ನಾಮನಿರ್ದೇಶನವನ್ನು ಮಾಡುವ ಕಾರ್ಯನಿರತ ಪತ್ರಕರ್ತನು ಮೃತನಾದ ಸಂದರ್ಭದಲ್ಲಿ ಉಪದಾನವನ್ನು ಸ್ವೀಕರಿಸಲು ನಿಯಮಿಸಿದ ರೀತಿಯಲ್ಲಿ ಯಾರೇ ವ್ಯಕ್ತಿಯನ್ನು ಅವನು ನೇಮಕ ಮಾಡುವುದು ಆ ಕಾರ್ಯನಿರತ ಪತ್ರಕರ್ತನಿಗೆ ಕಾನೂನು ಸಮ್ಮತವಾಗಿರತಕ್ಕದ್ದು.

6. ಕೆಲಸದ ವೇಳೆ:- (1) ಈ ಅಧಿನಿಯಮದ ಮೇರೆಗೆ ಮಾಡಬಹುದಾದಂಥ ಯಾವುದೇ ನಿಯಮಗಳಿಗೊಳಪಟ್ಟು, ಯಾರೇ ಕಾರ್ಯನಿರತ ಪತ್ರಕರ್ತನು ಊಟಕ್ಕಾಗಿಯೇ ಮೀಸಲಿರಿಸಿದ ಸಮಯವನ್ನು ಹೊರತುಪಡಿಸಿ, ನಿರಂತರ ನಾಲ್ಕು ವಾರಗಳಲ್ಲಿಯ ಯಾವುದೇ ಅವಧಿಯಲ್ಲಿ ಒಂದು ನೂರಾ ನಲವತ್ನಾಲ್ಕು ಗಂಟೆಗಳಿಗಿಂತ ಹೆಚ್ಚಿಗೆ ಯಾವುದೇ ವೃತ್ತಪತ್ರಿಕಾ ಸಂಸ್ಥೆಯಲ್ಲಿ ಕೆಲಸ ಮಾಡುವಂತೆ ಅವನನ್ನು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಹಾಗೆ ಕೆಲಸ ಮಾಡಲು ಅವನಿಗೆ ಅನುಮತಿಸತಕ್ಕದ್ದಲ್ಲ.

(2) ಪ್ರತಿಯೊಬ್ಬ ಕಾರ್ಯನಿರತ ಪತ್ರಕರ್ತನಿಗೆ, ರಾತ್ರಿ 10 ಗಂಟೆ ಮತ್ತು ಬೆಳಿಗ್ಗೆ 6 ಗಂಟೆಯ ನಡುವಣ ಅವಧಿಯೂ ಸೇರಿ ನಿರಂತರ ಏಳು ದಿನಗಳ ಯಾವುದೇ ಅವಧಿಯಲ್ಲಿ ನಿರಂತರ ಇಪ್ಪತ್ನಾಲ್ಕು ಗಂಟೆಗಳಿಗೆ ಕಡಿಮೆಯಿಲ್ಲದಂತೆ ವಿಶ್ರಾಂತಿ ಪಡೆಯಲು ಅನುಮತಿಸತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ, "ವಾರ" ಎಂದರೆ ಶನಿವಾರದ ಮಧ್ಯರಾತ್ರಿಯಿಂದ ಆರಂಭವಾಗುವ ಏಳು ದಿನಗಳ ಅವಧಿ.

7. ರಜೆ:- ನಿಯಮಿಸಬಹುದಾದಂಥ ರಜಾ ದಿನಗಳು, ಸಾಂದರ್ಭಿಕ ರಜೆ ಅಥವಾ ಇತರ ಬಗೆಯ ರಜೆಗಳಿಗೆ ಬಾಧಕವಾಗದಂತೆ- ಪ್ರತಿಯೊಬ್ಬ ಕಾರ್ಯನಿರತ ಪತ್ರಕರ್ತನು ಈ ಮುಂದಿನಂತೆ ರಜೆಗೆ ಹಕ್ಕುಳ್ಳವನಾಗಿರತಕ್ಕದ್ದು.

(ಎ) ಕರ್ತವ್ಯದ ಮೇಲೆ ಕಳೆದ ಅವಧಿಯ ಹನ್ನೊಂದನೆ ಒಂದು ಭಾಗಕ್ಕೆ ಕಡಿಮೆಯಿಲ್ಲದಂತೆ ಪೂರ್ಣ ಮಜೂರಿಗಳಿಗೆ ರಜೆ;

(ಬಿ) ಸೇವಾವಧಿಯ ಹದಿನೆಂಟನೆ ಒಂದು ಭಾಗಕ್ಕೆ ಕಡಿಮೆಯಿಲ್ಲದಂತೆ ವೈದ್ಯಕೀಯ ಪ್ರಮಾಣ ಪತ್ರದ ಮೇಲೆ ಅರ್ಧ ಮಜೂರಿ ರಜೆ

8. ಮಜೂರಿ ದರಗಳನ್ನು ನಿಗದಿಪಡಿಸುವಿಕೆ ಅಥವಾ ಪರಿಷ್ಕರಣೆ:- (1) ಕೇಂದ್ರ ಸರ್ಕಾರವು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ,-

(ಎ) ಕಾರ್ಯನಿರತ ಪತ್ರಕರ್ತರಿಗೆ ಸಂಬಂಧಪಟ್ಟಂತೆ ಮಜೂರಿ ದರಗಳನ್ನು ನಿಗದಿಪಡಿಸಬಹುದು;

(ಬಿ) ಈ ಪ್ರಕರಣದ ಮೇರೆಗೆ ನಿಗದಿಪಡಿಸಿದ ಅಥವಾ ಕಾರ್ಯನಿರತ ಪತ್ರಕರ್ತರ (ವೇತನ ಮಜೂರಿ ದರಗಳ ನಿಗದಿ) ಅಧಿನಿಯಮ, 1958ರ (1958ರ 29) 6ನೇ ಪ್ರಕರಣದ ಮೇರೆಗಿನ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಮಜೂರಿ ದರಗಳನ್ನು ತಾನು ಸೂಕ್ತವೆಂದು ಭಾವಿಸಬಹುದಾದಂಥ ಮಧ್ಯಂತರಗಳಲ್ಲಿ, ಕಾಲಕಾಲಕ್ಕೆ ಪರಿಷ್ಕರಿಸಬಹುದು.

(2) ಕಾರ್ಯನಿರತ ಪತ್ರಕರ್ತರಿಗೆ ಸಂಬಂಧಪಟ್ಟಂತೆ ವೇಳಾ ಕೆಲಸದ ಹಾಗೂ ತುಂಡು ಕೆಲಸಕ್ಕೆ ಕೇಂದ್ರ ಸರ್ಕಾರದ ಮಜೂರಿ ದರಗಳನ್ನು ನಿಗದಿಪಡಿಸಬಹುದು ಅಥವಾ ಪರಿಷ್ಕರಿಸಬಹುದು.

9. ಮಜೂರಿ ದರಗಳನ್ನು ನಿಗದಿಪಡಿಸುವ ಮತ್ತು ಪರಿಷ್ಕರಿಸುವ ವಿಧಾನ- ಈ ಅಧಿನಿಯಮದ ಮೇರೆಗೆ ಕಾರ್ಯನಿರತ ಪತ್ರಕರ್ತರಿಗೆ ಸಂಬಂಧಪಟ್ಟಂತೆ ಮಜೂರಿ ದರಗಳನ್ನು ನಿಗದಿಪಡಿಸುವ ಅಥವಾ ಪರಿಷ್ಕರಿಸುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ಅವಶ್ಯವಾದಾಗಲೆಲ್ಲಾ ಈ ಮುಂದಿನವರನ್ನೊಳಗೊಂಡಿರತಕ್ಕ ಒಂದು ಮಜೂರಿ ಮಂಡಲಿಯನ್ನು ರಚಿಸತಕ್ಕದ್ದು:-

(ಎ) ವೃತ್ತಪತ್ರಿಕಾ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ನಿಯೋಜಕರನ್ನು ಪ್ರತಿನಿಧಿಸುವ ಮೂವರು ವ್ಯಕ್ತಿಗಳು;

(ಬಿ) ಕಾರ್ಯನಿರತ ಪತ್ರಕರ್ತರನ್ನು ಪ್ರತಿನಿಧಿಸುವ ಮೂವರು ವ್ಯಕ್ತಿಗಳು;

(ಸಿ) ನಾಲ್ವರು ಸ್ವತಂತ್ರ ವ್ಯಕ್ತಿಗಳು, ಇವರಲ್ಲಿ ಒಬ್ಬನು ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶರಾಗಿದ್ದವನಾಗಿರತಕ್ಕದ್ದು ಮತ್ತು ಅವನನ್ನು ಆ ಸರ್ಕಾರವು ಅದರ ಅಧ್ಯಕ್ಷನೆಂದು ನೇಮಕಮಾಡತಕ್ಕದ್ದು.

10. ಮಂಡಲಿಯ ಶಿಫಾರಸುಗಳು:- (1) ಮಂಡಲಿಯು, ತಾನು ಸೂಕ್ತವೆಂದು ಆಲೋಚಿಸುವ ರೀತಿಯಲ್ಲಿ, ನೋಟೀಸನ್ನು ಪ್ರಕಟಿಸುವ ಮೂಲಕ, ವೃತ್ತಪತ್ರಿಕಾ ಸಂಸ್ಥೆಗಳು ಹಾಗೂ ಕಾರ್ಯನಿರತ ಪತ್ರಕರ್ತರು ಮತ್ತು ಕಾರ್ಯನಿರತ ಪತ್ರಕರ್ತರ ಮಜೂರಿ ದರಗಳನ್ನು ನಿಗದಿಪಡಿಸುವಲ್ಲಿ ಅಥವಾ ಪರಿಷ್ಕರಿಸುವಲ್ಲಿ ಆಸಕ್ತಿಯುಳ್ಳ ಇತರ ವ್ಯಕ್ತಿಗಳನ್ನು ಕಾರ್ಯನಿರತ ಪತ್ರಕರ್ತರ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ನಿಗದಿಪಡಿಸಬಹುದಾದಂಥ ಅಥವಾ ಪರಿಷ್ಕರಿಸಬಹುದಾದಂಥ ಮಜೂರಿ ದರಗಳಿಗೆ ಸಂಬಂಧಪಟ್ಟಂತೆ ಅವರು ಸೂಕ್ತವೆಂದು ಆಲೋಚಿಸಬಹುದಾದಂಥ ಮನವಿ ಸಲ್ಲಿಸುವಂತೆ ಅವರನ್ನು ಕೋರತಕ್ಕದ್ದು.

(2) ಅಂಥ ಪ್ರತಿಯೊಂದು ಮನವಿಯು ಲಿಖಿತದಲ್ಲಿರತಕ್ಕದ್ದು ಮತ್ತು ಅದನ್ನು ಮಂಡಲಿಯು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಸಲ್ಲಿಸತಕ್ಕದ್ದು ಮತ್ತು ಮಜೂರಿಯನ್ನು ಸಂದಾಯ ಮಾಡಲು ನಿಯೋಜಕನಿಗಿರುವ ಸಾಮರ್ಥ್ಯ ಮತ್ತು ಮನವಿ ಸಲ್ಲಿಸುವ ವ್ಯಕ್ತಿಗೆ ತನ್ನ ಮನವಿಗೆ ಸಂಬಂಧಿಸಿದಂತೆ ಸುಸಂಬದ್ಧವೆಂದು ಕಂಡುಬರಬಹುದಾದಂತಹ ಇತರ ಯಾವುದೇ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ತನ್ನ ಅಭಿಪ್ರಾಯದಲ್ಲಿ ಸೂಕ್ತವೆನಿಸುವ ಮಜೂರಿ ದರಗಳನ್ನು ಆ ಮನವಿಯಲ್ಲಿ ನಿರೂಪಿಸತಕ್ಕದ್ದು.

(3) ಮಂಡಲಿಯು ಮೇಲೆ ಹೇಳಿದಂತಹ ಮನವಿಗಳು ಯಾವುದಾದರೂ ಇದ್ದರೆ, ಅವುಗಳನ್ನು ಗಮನಿಸಿ ಮತ್ತು ತನ್ನ ಮುಂದೆ ಇಟ್ಟ ವಿಷಯಗಳನ್ನು ಪರಿಶೀಲಿಸಿದ ತರುವಾಯ, ಆ ಕಾರ್ಯನಿರತ ಪತ್ರಕರ್ತರಿಗೆ ಸಂಬಂಧಪಟ್ಟಂತೆ ಮಜೂರಿ ದರಗಳನ್ನು ನಿಗದಿಪಡಿಸಲು ಅಥವಾ ಪರಿಷ್ಕರಿಸಲು ಮಂಡಲಿಯು ಸೂಕ್ತವೆಂದು ಆಲೋಚಿಸಬಹುದಾದಂಥ ಶಿಫಾರಸುಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಯಾವುದೇ ಅಂಥ ಶಿಫಾರಸುಗಳು ಅವು ಉತ್ತರಾನ್ವಯವಾಗಿಯಾಗಲಿ ಅಥವಾ ಪೂರ್ವಾನ್ವಯವಾಗಿಯಾಗಲಿ ಯಾವ ದಿನಾಂಕದಿಂದ ಮಜೂರಿ ದರಗಳನ್ನು ಜಾರಿಗೊಳಿಸಬೇಕೆಂಬುದನ್ನು ಅಂಥ ಯಾವುದೇ ಶಿಫಾರಸುಗಳಲ್ಲಿ ನಿರ್ದಿಷ್ಟಪಡಿಸಬಹುದು.

(4) ಕೇಂದ್ರ ಸರ್ಕಾರಕ್ಕೆ ಯಾವುದೇ ಶಿಫಾರಸುಗಳನ್ನು ಮಾಡುವಾಗ ಮಂಡಲಿಯು, ಜೀವನ ವೆಚ್ಚ, ಅದೇ ರೀತಿ ಹೋಲಿಕೆಮಾಡಬಹುದಾದ ನಿಯೋಜನೆಗೆ ಇರುವ ಪ್ರಸ್ತುತ ಮಜೂರಿ ದರಗಳು, ದೇಶದ ಬೇರೆ ಬೇರೆ ಪ್ರದೇಶ ವೃತ್ತಪತ್ರಿಕಾ ಉದ್ಯಮಕ್ಕೆ ಸಂಬಂದಪಟ್ಟಂತೆ ಇರುವ ಸನ್ನಿವೇಶಗಳು ಮತ್ತು ಅ ಮಂಡಲಿಗೆ ಸುಸಂಗತವೆಂದು ತೋರುವಂಥ ಯಾವುದೇ ಇತರ ಸನ್ನಿವೇಶಗಳನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

ವಿವರಣೆ:- ಸಂದೇಹಗಳ ನಿವಾರಣೆಗಾಗಿ, ಈ ಉಪ-ಪ್ರಕರಣದಲ್ಲಿ ಇರುವುದು ಯಾವುದೂ, ಅಖಿಲ ಭಾರತ ಆಧಾರದ ಮೇಲೆ ಮಜೂರಿಗಳ ದರಗಳನ್ನು ನಿಗದಿ ಮಾಡುವುದಕ್ಕಾಗಿ ಅಥವಾ ಪರಿಷ್ಕರಣೆ ಮಾಡುವುದಕ್ಕಾಗಿ, ಶಿಫಾರಸುಗಳನ್ನು ಮಾಡಲು ಮಂಡಲಿಯನ್ನು ತಡೆಯತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ;-

11. ಮಂಡಲಿಯ ಅಧಿಕಾರಗಳು ಮತ್ತು ಪ್ರಕ್ರಿಯೆ:- (1) (2)ನೇ ಉಪ-ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, ಮಂಡಲಿಯು, ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ ಮೇರೆಗೆ ರಚಿಸಲಾದ ಕೈಗಾರಿಕಾ ನ್ಯಾಯಾಧಿಕರಣವು ತನಗೆ ಉಲ್ಲೇಖಿಸಲಾದ ಕೈಗಾರಿಕಾ ವಿವಾದದ ನ್ಯಾಯಾ ನಿರ್ಣಯಕ್ಕೆ ಸಂಬಂಧಿಸಿದಂತೆ ಚಲಾಯಿಸುವ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಈ ಅಧಿನಿಯಮದಲ್ಲಿಯ ಉಪಬಂಧಗಳು ಮತ್ತು ಅವುಗಳ ಮೇರೆಗೆ ರಚಿಸಿದ ನಿಯಮಗಳೇನಾದರೂ ಇದ್ದರೆ ಅವುಗಳಿಗೊಳಪಟ್ಟು, ತನ್ನದೇ ಆದ ಕಾರ್ಯವಿಧಾನವನ್ನು ವಿನಿಯಮಗೊಳಿಸುವ ಅಧಿಕಾರ ಹೊಂದಿರತಕ್ಕದ್ದು.

(2) ಮಂಡಲಿಗೆ ಸಲ್ಲಿಸಿದ ಯಾವುದೇ ಮನವಿಗಳನ್ನು ಮತ್ತು ಸಾಕ್ಷಿಯ ರೂಪದಲ್ಲಿ ಅದಕ್ಕೆ ಸಲ್ಲಿಸಿದ ಯಾವುದೇ ದಸ್ತಾವೇಜುಗಳನ್ನು, ಆ ವಿಷಯದಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗೆ ನಿಯಮಿಸಬಹುದಾದಂಥ ಶುಲ್ಕ ಸಂದಾಯಮಾಡಿದ ತರುವಾಯ ಪರಿಶೀಲಿಸಲು ಅವಕಾಶವಿರತಕ್ಕದ್ದು.

(3) ಒಂದು ವೇಳೆ, ಯಾವುದೇ ಕಾರಣಕ್ಕಾಗಿ, ಮಂಡಳಿಯ ಅಧ್ಯಕ್ಷರ ಅಥವಾ ಯಾವುದೇ ಇತರ ಸದಸ್ಯರ ಪದವು ಖಾಲಿಯಾದಲ್ಲಿ, ಕೇಂದ್ರ ಸರ್ಕಾರವು, ಅದಕ್ಕೆ ಮತ್ತೊಬ್ಬ ವ್ಯಕ್ತಿಯನ್ನು 9ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ನೇಮಿಸಿ ಆ ಖಾಲಿ ಸ್ಥಾನವನ್ನು ಭರ್ತಿಮಾಡತಕ್ಕದ್ದು ಮತ್ತು ಹಾಗೆ ಪುನ: ರಚಿಸಲಾದ ಮಂಡಲಿಯ ಮುಂದಿದ್ದ ಯಾವುದೇ ವ್ಯವಹರಣೆಯನ್ನು ಪದವು ಖಾಲಿಯಾದ ಹಂತದಿಂದ ಮುಂದುವರಿಸಬಹುದು.

12. ಮಜೂರಿ ಮಂಡಲಿಯ ಶಿಫಾರಸುಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ :- (1) ಮಂಡಳಿಯ ಶಿಫಾರಸುಗಳನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ಕೇಂದ್ರ ಸರ್ಕಾರವು, ಆ ಶಿಫಾರಸುಗಳನ್ನು ಅನುಸರಿಸಿ ಅಥವಾ ತನ್ನ ಅಭಿಪ್ರಾಯದಲ್ಲಿ ಶಿಫಾರಸುಗಳ ಸ್ವರೂಪದಲ್ಲಿ ಮಹತ್ವದ ಬದಲಾವಣೆಗಳಾಗದಂತೆ ತಾನು ಸೂಕ್ತವೆಂದು ಆಲೋಚಿಸುವಂಥ ಮಾರ್ಪಾಟುಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಒಂದು ಆದೇಶವನ್ನು ಹೊರಡಿಸತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಆಲೋಚಿಸಿದರೆ-

(ಎ) ತಾನು ಸೂಕ್ತವೆಂದು ಆಲೋಚಿಸುವಂತೆ ಆ ಶಿಫಾರಸುಗಳಲ್ಲಿ (1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ಸ್ವರೂಪದ ಮಾರ್ಪಾಟುಗಳಾಗಿರದಂಥ ಮಾರ್ಪಾಡುಗಳನ್ನು ಮಾಡಬಹುದು:

ಪರಂತು, ಯಾವುದೇ ಅಂಥ ಮಾರ್ಪಾಟುಗಳನ್ನು ಮಾಡುವುದಕ್ಕೆ ಮುಂಚೆ, ಕೇಂದ್ರ ಸರ್ಕಾರವು, ಅದರಿಂದ ಬಾಧಿತರಾಗಬಹುದಾದಂಥ ಎಲ್ಲ ವ್ಯಕ್ತಿಗಳಿಗೆ ನಿಯಮಿಸಬಹುದಾದಂಥ ರೀತಿಯಲ್ಲಿ ನೋಟೀಸು ಕೊಡುವ ವ್ಯವಸ್ಥೆ ಮಾಡತಕ್ಕದ್ದು ಮತ್ತು ಈ ಸಂಬಂಧದಲ್ಲಿ ಅವರು ಲಿಖಿತದಲ್ಲಿ ಮಾಡಬಹುದಾದಂಥ ಯಾವುದೇ ಮನವಿಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು; ಅಥವಾ

(ಬಿ) ಶಿಫಾರಸುಗಳನ್ನು ಅಥವಾ ಅದರ ಯಾವುದೇ ಭಾಗಗಳನ್ನು ಅಭಿಪ್ರಾಯ ಕೋರಿ ಮಂಡಲಿಗೆ ಕಳಿಸಬಹುದು ಮತ್ತು ಅಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಮಂಡಲಿಯ ಹೆಚ್ಚಿನ ಶಿಫಾರಸುಗಳನ್ನು ಪರಿಗಣಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಆಲೋಚಿಸುವಂತೆ ಶಿಫಾರಸುಗಳನ್ನು ಅನುಸರಿಸಿಯಾಗಲಿ ಅಥವಾ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದಂಥ ಮಾರ್ಪಾಟುಗಳೊಂದಿಗೆಯಾಗಲಿ ಆದೇಶ ಹೊರಡಿಸಬಹುದು.

(3) ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಮಾಡಿದ ಪ್ರತಿಯೊಂದು ಆದೇಶವನ್ನು, ಆ ಆದೇಶಕ್ಕೆ ಸಂಬಂಧಪಟ್ಟ ಮಂಡಳಿಯ ಶಿಫಾರಸುಗಳೊಂದಿಗೆ ರಾಜ್ಯ ಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ಆದೇಶವು, ಪ್ರಕಟಣೆಯ ದಿನಾಂಕದಿಂದ ಆಗಲಿ ಅಥವಾ ಆ ಆದೇಶದಲ್ಲಿ ಪೂರ್ವಾನ್ವಯವಾಗಿಯಾಗಲಿ ಅಥವಾ ಉತ್ತರಾನ್ವಯವಾಗಿಯಾಗಲಿ ನಿರ್ದಿಷ್ಟಪಡಿಸಬಹುದಾದಂತಹ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

13. ಕಾರ್ಯನಿರತ ಪತ್ರಕರ್ತರು, ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ದರಗಳಿಗಿಂತ ಕಡಿಮೆಯಲ್ಲದ ದರಗಳಲ್ಲಿ ಮಜೂರಿ ಪಡೆಯಲು ಹಕ್ಕುಳ್ಳವರಾಗಿರುವುದು:- 12ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದ ಆದೇಶವು ಜಾರಿಗೆ ಬಂದ ತರುವಾಯ ಪ್ರತಿಯೊಬ್ಬ ಕಾರ್ಯನಿರತ ಪತ್ರಕರ್ತನು, ಯಾವುದೇ ಸಂದರ್ಭದಲ್ಲಿ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಮಜೂರಿ ದರಗಳಿಗೆ ಕಡಿಮೆಯಲ್ಲದ ದರಗಳಲ್ಲಿ ತನ್ನ ನಿಯೋಜಕನಿಂದ ಮಜೂರಿ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

13ಎ. ಮಧ್ಯಕಾಲೀನ ಮಜೂರಿಗಳ ದರಗಳನ್ನು ನಿಗದಿಪಡಿಸಲು ಸರ್ಕಾರದ ಅಧಿಕಾರ :-(1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ಕಾರ್ಯನಿರತ ಪತ್ರಕರ್ತರಿಗೆ ಸಂಬಂಧಪಟ್ಟಂತೆ ಮಜೂರಿಯ ಮಧ್ಯಕಾಲೀನ ದರಗಳನ್ನು ನಿಗದಿಪಡಿಸುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಆ ಬಗ್ಗೆ ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸಿ ಹಾಗೆ ಮಾಡಬಹುದು.

(2) ಹಾಗೆ ನಿಗದಿ ಪಡಿಸಲಾದ ಯಾವುದೇ ಮಧ್ಯಕಾಲೀನ ಮಜೂರಿಯ ದರಗಳಿಗೆ ವೃತ್ತಪತ್ರಿಕಾ ಸಂಸ್ಥೆಗಳ ಸಂಬಂಧಪಟ್ಟ ಎಲ್ಲ ನಿಯೋಜಕರು ಬದ್ಧರಾಗಿರತಕ್ಕದ್ದು ಮತ್ತು ಪ್ರತಿಯೊಬ್ಬ ಕಾರ್ಯನಿರತ ಪತ್ರಕರ್ತನು ಯಾವುದೇ ಸಂದರ್ಭದಲ್ಲಿ (1)ನೇ ಉಪ-ಪ್ರಕರಣದ ಮೇರೆಗೆ ನಿಗದಿಪಡಿಸಲಾದ ಮಧ್ಯಕಾಲೀನ ಮಜೂರಿ ದರಗಳಿಗಿಂತ ಕಡಿಮೆಯಲ್ಲದ ದರದ ಮಜೂರಿಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(3) (1)ನೇ ಉಪ-ಪ್ರಕರಣದ ಮೇರೆಗೆ ನಿಗದಿಪಡಿಸಲಾದ ಯಾವುವೇ ಮಧ್ಯಕಾಲೀನ ಮಜೂರಿಯ ದರಗಳು 12ನೇ ಪ್ರಕರಣದ ಮೇರೆಗಿನ ಕೇಂದ್ರ ಸರ್ಕಾರದ ಆದೇಶವು ಕಾರ್ಯರೂಪಕ್ಕೆ ಬರುವವರೆಗೆ ಜಾರಿಯಲ್ಲಿ ಇರತಕ್ಕದ್ದು.

13ಎಎ. ಕಾರ್ಯನಿರತ ಪತ್ರಕರ್ತರಿಗೆ ಸಂಬಂಧಪಟ್ಟಂತೆ ಮಜೂರಿ ದರಗಳನ್ನು ನಿಗದಿಪಡಿಸಲು ಅಥವಾ ಪರಿಷ್ಕರಿಸಲು ನ್ಯಾಯಾಧಿಕರಣದ ರಚನೆ:- (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗೆ ಕಾರ್ಯನಿರತ ಪತ್ರಕರ್ತರಿಗೆ ಸಂಬಂಧಿಸಿದಂತೆ ಮಜೂರಿ ದರಗಳನ್ನು ನಿಗದಿಪಡಿಸುವ ಅಥವಾ ಪರಿಷ್ಕರಿಸುವ ಉದ್ದೇಶಕ್ಕಾಗಿ 9ನೇ ಪ್ರಕರಣದ ಮೇರೆಗೆ ರಚಿಸಲಾದ ಮಂಡಲಿಯು (ಯಾವುದೇ ಕಾರಣಕ್ಕಾಗಿರಲಿ) ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅಸಮರ್ಥವಾಗಿದೆಯೆಂದು, ಮತ್ತು ಅಂಥ ಸಂದರ್ಭಗಳಲ್ಲಿ ಈ ಅಧಿನಿಯಮದ ಮೇರೆಗೆ ಕಾರ್ಯನಿರತ ಪತ್ರಕರ್ತರಿಗೆ ಸಂಬಂಧಪಟ್ಟಂತೆ ಮಜೂರಿಯ ದರಗಳನ್ನು ನಿಗದಿಪಡಿಸುವ ಅಥವಾ ಪರಿಷ್ಕರಿಸುವ ಉದ್ದೇಶಕ್ಕಾಗಿ, ಒಂದು ನ್ಯಾಯಾಧಿಕರಣವನ್ನು ರಚಿಸುವುದು ಅವಶ್ಯವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಲ್ಲಿ ರಾಜ ಪತ್ರದಲ್ಲಿ ಅಧಿಸೂಚನೆಯ ಮೂಲಕ ಹಾಗೆ ಮಾಡಬಹುದು ಮತ್ತು ಅಂಥ ನ್ಯಾಯಾಧಿಕರಣವು ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಅಥವಾ ನ್ಯಾಯಾಧೀಶರಾಗಿರುವ ವ್ಯಕ್ತಿಯನ್ನು ಒಳಗೊಂಡಿರತಕ್ಕದ್ದು.

(2) 10 ರಿಂದ 13ಎ ಪ್ರಕರಣದವರೆಗಿನ ಉಪಬಂಧಗಳು ಈ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಚಿಸಲಾದ ನ್ಯಾಯಾಧಿಕರಣಕ್ಕೆ ಕೇಂದ್ರ ಸರ್ಕಾರ ಹಾಗೂ ಕಾರ್ಯನಿರತ ಪತ್ರಕರ್ತರಿಗೆ ಹಾಗೂ ಇವರಿಗೆ ಸಂಬಂದಪಟ್ಟಂತೆ ಈ ಮುಂದಿನ ಮಾರ್ಪಾಡುಗಳಿಗೊಳಪಟ್ಟು ಅನ್ವಯವಾಗತಕ್ಕದ್ದು.

(ಎ) ಅದರಲ್ಲಿ ಮಂಡಲಿಗೆ ಮಾಡಲಾಗಿರುವ ಉಲ್ಲೇಖಗಳನ್ನು ಅವು ಬರುವೆಡೆಗಳಲ್ಲಾ ನ್ಯಾಯಾಧಿಕರಣಕ್ಕೆ ಮಾಡಿರವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಬಿ) 11ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ.

(i) ಮಂಡಲಿಯ ಅಧ್ಯಕ್ಷನ ಅಥವಾ ಯಾರೇ ಇತರ ಸದಸ್ಯನ ಪದಕ್ಕೆ ಮಾಡಿರುವ ಉಲ್ಲೇಖವನ್ನು ನ್ಯಾಯಾಧಿಕರಣವಾಗಿರುವ ವ್ಯಕ್ತಿಯ ಪದಕ್ಕೆ ಸಂಬಂಧಪಟ್ಟಂತೆ ಮಾಡಿರುವ ಉಲ್ಲೇಖವೆಂದು ಅರ್ಥೈಸತಕ್ಕದ್ದು; ಮತ್ತು

(ii) 9ನೇ ಪ್ರಕರಣಕ್ಕೆ ಮಾಡಿರುವ ಉಲ್ಲೇಖವನ್ನು ಈ ಪ್ರಕರಣದ (1)ನೇ ಉಪ-ಪ್ರಕರಣಕ್ಕೆ ಮಾಡಿರುವ ಉಲ್ಲೇಖವೆಂದು ಅರ್ಥೈಸತಕ್ಕದ್ದು; ಮತ್ತು

(ಸಿ) 13ನೇ ಪ್ರಕರಣ ಮತ್ತು 13ಎ ಪ್ರಕರಣದಲ್ಲಿ, 12ನೇ ಪ್ರಕರಣಕ್ಕೆ ಮಾಡಲಾಗಿರುವ ಉಲ್ಲೇಖಗಳನ್ನು, ಈ ಪ್ರಕರಣ ದೊಂದಿಗೆ ಓದಿಕೊಂಡ 12ನೇ ಪ್ರಕರಣಕ್ಕೆ ಮಾಡಿಕೊಂಡಿರುವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ನ್ಯಾಯಾಧಿಕರಣವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಮಜೂರಿ ಮಂಡಲಿಯು ದಾಖಲಿಸಿದ ಅಥವಾ ಭಾಗಶಃ ಮಜೂರಿ ಮಂಡಲಿಯು ದಾಖಲಿಸಿದ ಮತ್ತು ಭಾಗಶ: ತಾನೇ ದಾಖಲಿಸಿದ ಸಾಕ್ಷ್ಯವನ್ನು ಅನುಸರಿಸಬಹುದು;

ಪರಂತು, ಈಗಾಗಲೇ ದಾಖಲಿಸಲಾದ ಯಾರೇ ಸಾಕ್ಷಿಯ ಯಾವುದೇ ಸಾಕ್ಷ್ಯವನ್ನು ಮತ್ತಷ್ಟು ಪರಿಶೀಲನೆ ಮಾಡುವುದು ನ್ಯಾಯದ ಹಿತಾಸಕ್ತಿಯಿಂದ ಅವಶ್ಯವೆಂದು ನ್ಯಾಯಾಧಿಕರಣವು ಅಭಿಪ್ರಾಯಪಟ್ಟರೆ, ಅದು ಅಂಥ ಯಾರೇ ಸಾಕ್ಷಿಯನ್ನು ಪುನಃ ಸಮನುಮಾಡಬಹುದು ಮತ್ತು ತಾನು ಅನುಮತಿಸಬಹುದಾದಂಥ ಮತ್ತಷ್ಟು ಪರೀಕ್ಷೆ, ಪಾಟಿ ಸವಾಲು ಹಾಗೂ ಪುನರ್ ಪರೀಕ್ಷೆಯೇನಾದರೂ ಇದ್ದರೆ, ಅವುಗಳನ್ನು ಮಾಡಿದ ತರುವಾಯ ಆ ಸಾಕ್ಷಿಯನ್ನು ಬಿಡುಗಡೆಗೊಳಿಸತಕ್ಕದ್ದು.

(4) (1)ನೇ ಉಪ-ಪ್ರಕರಣದ ಮೇರೆಗೆ ನ್ಯಾಯಾಧಿಕರಣವನ್ನು ರಚಿಸಿದ, ಮೇಲೆ 9ನೇ ಪ್ರಕರಣದ ಮೇರೆಗೆ ರಚಿಸಲಾದ ಮತ್ತು ಅಂಥ ರಚನೆಯ ನಿಕಟಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಂಡಲಿಯು ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು ಮತ್ತು ಆ ಮಂಡಲಿಯಲ್ಲಿರುವ ಸದಸ್ಯರು ತಮ್ಮ ತಮ್ಮ ಪದಗಳನ್ನು ತೆರವು ಮಾಡಿರುವರೆಂದೂ ಭಾವಿಸತಕ್ಕದ್ದು:

ಪರಂತು, ಕಾರ್ಯನಿರತ ಪತ್ರಕರ್ತರಿಗೆ ಸಂಬಂದಪಟ್ಟಂತೆ 13ಎ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನಿಗದಿಪಡಿಸಿದ ಮತ್ತು ನ್ಯಾಯಾಧಿಕರಣದ ರಚನೆಯ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಮಜೂರಿಗಳ ಯಾವುದೇ ಮಧ್ಯಕಾಲೀನ ದರಗಳು, ಈ ಪ್ರಕರಣದೊಂದಿಗೆ ಓದಿಕೊಂಡ 12ನೇ ಪ್ರಕರಣದ ಮೇರೆಗಿನ ಕೇಂದ್ರ ಸರ್ಕಾರದ ಆದೇಶವು ಪ್ರವರ್ತನಿಗೆ ಬರುವವರೆಗೆ ಜಾರಿಯಲ್ಲಿರತಕ್ಕದ್ದು.

## ಅಧ್ಯಾಯ-II ಎ

## ಪತ್ರಕರ್ತರಲ್ಲದ ವೃತ್ತ ಪತ್ರಿಕಾ ನೌಕರರು,

13ಬಿ. ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರ ಮಜೂರಿ ದರಗಳನ್ನು ನಿಗದಿಪಡಿಸುವಿಕೆ ಅಥವಾ ಪರಿಷ್ಕರಣೆ:- (1) ಕೇಂದ್ರ ಸರ್ಕಾರವು ಇದರಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತಹ ರೀತಿಯಲ್ಲಿ,-

(ಎ) ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರ ಮಜೂರಿ ದರಗಳನ್ನು ನಿಗದಿಪಡಿಸಬಹುದು; ಮತ್ತು

(ಬಿ) ಈ ಪ್ರಕರಣದ ಮೇರೆಗೆ ನಿಗದಿಪಡಿಸಲಾದ ಮಜೂರಿ ದರಗಳನ್ನು ತಾನು ಸೂಕ್ತವೆಂದು ಆಲೋಚಿಸುವಂಥ ಮಧ್ಯಂತರಗಳಲ್ಲಿ ಕಾಲಕಾಲಕ್ಕೆ ಪರಿಷ್ಕರಿಸಬಹುದು.

(2) ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರವು ವೇಳಾ ಕೆಲಸಕ್ಕೆ ಮತ್ತು ತುಂಡು ಕೆಲಸಕ್ಕೆ ಮಜೂರಿಯ ದರಗಳನ್ನು ನಿಗದಿಪಡಿಸಬಹುದು ಅಥವಾ ಪರಿಷ್ಕರಿಸಬಹುದು.

13ಸಿ. ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರಿಗೆ ಸಂಬಂಧಪಟ್ಟಂತೆ ಮಜೂರಿ ದರಗಳನ್ನು ನಿಗದಿಪಡಿಸಲು ಅಥವಾ ಪರಿಷ್ಕರಿಸಲು ಮಜೂರಿ ಮಂಡಲಿ:- ಈ ಅಧಿನಿಯಮದ ಮೇರೆಗೆ ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರಿಗೆ ಸಂಬಂಧಿಸಿದಂತೆ ಮಜೂರಿಯ ದರಗಳನ್ನು ನಿಗದಿಪಡಿಸುವ ಅಥವಾ ಪರಿಷ್ಕರಿಸುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ಅವಶ್ಯವಿದ್ದಾಗಲೆಲ್ಲಾ ಒಂದು ಮಜೂರಿ ಮಂಡಲಿಯನ್ನು ರಚಿಸತಕ್ಕದ್ದು, ಅದರಲ್ಲಿ,-

(ಎ) ವೃತ್ತಪತ್ರಿಕೆ ಸಂಸ್ಥೆಗಳಿಗೆ ಸಂಬಂಧಿಸಿದಂತೆ ನಿಯೋಜಕರನ್ನು ಪ್ರತಿನಿಧಿಸುವ ಮೂವರು ವ್ಯಕ್ತಿಗಳು;

(ಬಿ) ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರನ್ನು ಪ್ರತಿನಿಧಿಸುವ ಮೂವರು ವ್ಯಕ್ತಿಗಳು; ಮತ್ತು

(ಸಿ) ನಾಲ್ವರು ಸ್ವತಂತ್ರ ವ್ಯಕ್ತಿಗಳು, ಅವರಲ್ಲೊಬ್ಬರು ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿದ್ದ ಅಥವಾ ನ್ಯಾಯಾಧೀಶನಾಗಿರುವ ವ್ಯಕ್ತಿಯಾಗಿರತಕ್ಕದ್ದು ಮತ್ತು ಅವನನ್ನು ಅದರ ಅಧ್ಯಕ್ಷನೆಂದು ಆ ಸರ್ಕಾರವು ನೇಮಕ ಮಾಡತಕ್ಕದ್ದು.

13ಡಿ. ಕೆಲವು ಉಪಬಂಧಗಳ ಅನ್ವಯ:- 10 ರಿಂದ 13ಎ ವರೆಗಿನ ಪ್ರಕರಣಗಳ ಉಪಬಂಧಗಳು, 13ಸಿ ಪ್ರಕರಣದ ಮೇರೆಗೆ ರಚಿತವಾದ ಮಂಡಲಿಗೆ ಕೇಂದ್ರ ಸರ್ಕಾರ ಮತ್ತು ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರಿಗೆ ಮತ್ತು ಅವರ ಸಂಬಂಧದಲ್ಲಿ ಈ ಮುಂದಿನ ಮಾರ್ಪಾಟುಗಳಿಗೊಳಪಟ್ಟು ಅನ್ವಯವಾಗತಕ್ಕದ್ದು,-

(ಎ) ಮಂಡಲಿಗೆ ಹಾಗೂ ಅದರಲ್ಲಿನ ಕಾರ್ಯನಿರತ ಪತ್ರಕರ್ತರಿಗೆ ಮಾಡಿರುವ ಉಲ್ಲೇಖಗಳು, ಅವುಗಳು ಬರುವ ಕಡೆಯಲ್ಲೆಲ್ಲಾ ಅನುಕ್ರಮವಾಗಿ 13ಸಿ ಪ್ರಕರಣದ ಮೇರೆಗೆ ರಚಿತವಾದ ಮಂಡಲಿಗೆ ಮತ್ತು ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರಿಗೆ ಮಾಡಿರುವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಬಿ) 11ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ 9ನೇ ಪ್ರಕರಣಕ್ಕೆ ಮಾಡಿರುವ ಉಲ್ಲೇಖಗಳನ್ನು 13ಸಿ ಪ್ರಕರಣಕ್ಕೆ ಮಾಡಿರುವ ಉಲ್ಲೇಖವೆಂದು ಅರ್ಥೈಸತಕ್ಕದ್ದು; ಮತ್ತು

(ಸಿ) 13ನೇ ಪ್ರಕರಣ ಮತ್ತು 13ಎ ಪ್ರಕರಣದಲ್ಲಿ 12ನೇ ಪ್ರಕರಣಕ್ಕೆ ಮಾಡಿರುವ ಉಲ್ಲೇಖಗಳನ್ನು ಈ ಪ್ರಕರಣದೊಂದಿಗೆ ಓದಿಕೊಂಡ 12ನೇ ಪ್ರಕರಣಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

13ಡಿಡಿ. ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರಿಗೆ ಸಂಬಂಧಪಟ್ಟಂತೆ ಮಜೂರಿ ದರಗಳನ್ನು ನಿಗದಿಪಡಿಸಲು ಅಥವಾ ಪರಿಷ್ಕರಿಸಲು ನ್ಯಾಯಾಧಿಕರಣದ ರಚನೆ:- (1) ಈ ಅಧಿನಿಯಮದಲ್ಲಿ ಏನೇ ಇದ್ದರೂ ಈ ಅಧಿನಿಯಮದ ಮೇರೆಗೆ ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರ ಸಂಬಂಧದಲ್ಲಿ ಮಜೂರಿಯ ದರಗಳನ್ನು ನಿಗದಿಪಡಿಸುವ ಅಥವಾ ಪರಿಷ್ಕರಿಸುವ ಉದ್ದೇಶಕ್ಕಾಗಿ 13ಸಿ ಪ್ರಕರಣದ ಮೇರೆಗೆ ರಚಿಸಲಾದ ಮಂಡಲಿಯು (ಯಾವುದೇ ಕಾರಣಕ್ಕಾಗಿಯಾಗಲಿ) ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ಮತ್ತು ಅಂಥ ಸಂದರ್ಭಗಳಲ್ಲಿ ಈ ಅಧಿನಿಯಮದ ಮೇರೆಗೆ ಪತ್ರಕರ್ತರಲ್ಲದ ವೃತ್ತ ಪತ್ರಿಕಾ ನೌಕರರ ಸಂಬಂಧದಲ್ಲಿ ಮಜೂರಿ ದರಗಳನ್ನು ನಿಗದಿಪಡಿಸುವ ಅಥವಾ ಪರಿಷ್ಕರಿಸುವ ಉದ್ದೇಶಕ್ಕಾಗಿ, ಒಂದು ನ್ಯಾಯಾಧಿಕರಣವನ್ನು ರಚಿಸುವುದು ಅವಶ್ಯವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ರಾಜಪತ್ರದಲ್ಲಿ, ಅಧಿಸೂಚನೆಯನ್ನು ಹೊರಡಿಸುವ ಮೂಲಕ, ಹಾಗೆ ಮಾಡಬಹುದು ಮತ್ತು ಆ ನ್ಯಾಯಾಧಿಕರಣವು ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಒಬ್ಬ ವ್ಯಕ್ತಿಯನ್ನೊಳಗೊಂಡಿರತಕ್ಕದ್ದು.

(2) 10 ರಿಂದ 13ಎ ವರೆಗಿನ ಪ್ರಕರಣಗಳ ಉಪಬಂಧಗಳು ಈ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಚಿಸಲಾದ ನ್ಯಾಯಾಧಿಕರಣಕ್ಕೆ ,ಕೇಂದ್ರ ಸರ್ಕಾರಕ್ಕೆ ಮತ್ತು ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರಿಗೆ ಮತ್ತು ಅವರ ಸಂಬಂಧದಲ್ಲಿ ಈ ಮುಂದಿನ ಮಾರ್ಪಾಟುಗಳಿಗೊಳಪಟ್ಟು ಅನ್ವಯವಾಗತಕ್ಕದ್ದು;

(ಎ) ಮಂಡಲಿಗೆ ಮತ್ತು ಅದರಲ್ಲಿನ ಕಾರ್ಯನಿರತ ಪತ್ರಕರ್ತರಿಗೆ ಮಾಡಿರುವ ಉಲ್ಲೇಖಗಳನ್ನು ಅವುಗಳು ಬರುವ ಕಡೆಗಳಲೆಲ್ಲ ಕ್ರಮವಾಗಿ ನ್ಯಾಯಾಧಿಕರಣ ಮತ್ತು ಪತ್ರಕರ್ತರಲ್ಲದ ವೃತ್ತ ಪತ್ರಿಕಾ ನೌಕರರಿಗೆ ಮಾಡಿರುವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಬಿ) 11ನೇ ಪ್ರಕರಣದ (3) ನೇ ಉಪ-ಪ್ರಕರಣದಲ್ಲಿ;

(i) ಮಂಡಲಿಯ ಅಧ್ಯಕ್ಷನ ಅಥವಾ ಯಾರೇ ಇತರ ಸದಸ್ಯನ ಪದಕ್ಕೆ ಮಾಡಿರುವ ಉಲ್ಲೇಖಗಳನ್ನು, ನ್ಯಾಯಾಧಿಕರಣವಾಗಿರುವ ವ್ಯಕ್ತಿಯ ಪದಕ್ಕೆ ಮಾಡಿರುವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು; ಮತ್ತು

(ii) 9ನೇ ಪ್ರಕರಣಕ್ಕೆ ಮಾಡಿರುವ ಉಲ್ಲೇಖವನ್ನು ಈ ಪ್ರಕರಣದ (1) ನೇ ಉಪ-ಪ್ರಕರಣಕ್ಕೆ ಮಾಡಿರುವ ಉಲ್ಲೇಖವೆಂದು ಅರ್ಥೈಸತಕ್ಕದ್ದು; ಮತ್ತು

(ಸಿ) 13ನೇ ಪ್ರಕರಣ ಮತ್ತು 13ಎ ಪ್ರಕರಣದಲ್ಲಿ 12ನೇ ಪ್ರಕರಣಕ್ಕೆ ಮಾಡಿರುವ ಉಲ್ಲೇಖಗಳನ್ನು ಈ ಪ್ರಕರಣದೊಂದಿಗೆ ಓದಿಕೊಂಡ 12ನೇ ಪ್ರಕರಣಕ್ಕೆ ಮಾಡಿರುವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ನ್ಯಾಯಾಧಿಕರಣವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಮಜೂರಿ ಮಂಡಳಿಯು ದಾಖಲಿಸಿದ ಅಥವಾ ಮಜೂರಿ ಮಂಡಲಿಯು ಭಾಗಶಃ ದಾಖಲಿಸಿದ ಮತ್ತು ತಾನೇ ಭಾಗಶಃ ದಾಖಲಿಸಿದ ಸಾಕ್ಷ್ಯವನ್ನು ಅನುಸರಿಸಬಹುದು:

ಪರಂತು, ಈಗಾಗಲೇ ದಾಖಲಿಸಿದ ಯಾರೇ ಸಾಕ್ಷಿಯ ಸಾಕ್ಷ್ಯವನ್ನು ಮತ್ತಷ್ಟು ಪರಿಶೀಲನೆ ಮಾಡುವುದು ನ್ಯಾಯದ ಹಿತಾಸಕ್ತಿಯಿಂದ ಅವಶ್ಯವೆಂದು ನ್ಯಾಯಾಧಿಕರಣವು ಅಭಿಪ್ರಾಯಪಟ್ಟರೆ, ಅದು ಅಂಥ ಯಾರೇ ಸಾಕ್ಷಿಯನ್ನು ಪುನಃ ಸಮನು ಮಾಡುಬಹುದು ಮತ್ತು ತಾನು ಅನುಮತಿಸಬಹುದಾದಂಥ ಮತ್ತಷ್ಟು ಪರೀಕ್ಷೆ, ಪಾಟಿ ಸವಾಲು ಹಾಗೂ ಪುನರ್ ಪರೀಕ್ಷೆಯೇನಾದರೂ ಇದ್ದರೆ, ಅವುಗಳನ್ನು ಮಾಡಿದ ತರುವಾಯ ಸಾಕ್ಷಿಯನ್ನು ಬಿಡುಗಡೆಗೊಳಿಸತಕ್ಕದ್ದು.

(4) (1)ನೇ ಉಪ-ಪ್ರಕರಣದ ಮೇರೆಗೆ ನ್ಯಾಯಾಧಿಕರಣವನ್ನು ರಚಿಸಿದ ಮೇಲೆ 13ಸಿ ಪ್ರಕರಣದ ಮೇರೆಗೆ ರಚಿಸಲಾದ ಮತ್ತು ಅಂಥ ರಚನೆಯ ನಿಕಟಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಂಡಲಿಯು ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು ಮತ್ತು ಆ ಮಂಡಲಿಯಾಗಿರುವ ಸದಸ್ಯರು ತಮ್ಮ ತಮ್ಮ ಪದಗಳನ್ನು ತೆರವು ಮಾಡಿರುವರೆಂದು ಭಾವಿಸತಕ್ಕದ್ದು:

ಪರಂತು, ಪತ್ರಕರ್ತರಲ್ಲದ ವೃತ್ತಪತ್ರಿಕಾ ನೌಕರರಿಗೆ ಸಂಬಂಧಪಟ್ಟಂತೆ 13ಡಿ ಪ್ರಕರಣದೊಂದಿಗೆ ಓದಿಕೊಂಡ 13ಎ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನಿಗದಿಪಡಿಸಿದ ಮತ್ತು ನ್ಯಾಯಾಧಿಕರಣದ ರಚನೆಯ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಯೂವುದೇ ಮಧ್ಯಕಾಲೀನ ಮಜೂರಿ ದರಗಳು, ಈ ಪ್ರಕರಣದೊಂದಿಗೆ ಓದಿಕೊಂಡ 12ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದ ಆದೇಶವು ಪ್ರವರ್ತನೆಗೆ ಬರುವವರೆಗೆ ಜಾರಿಯಲ್ಲಿರತಕ್ಕದ್ದು.

## ಅಧ್ಯಾಯ-III

## ವೃತ್ತಪತ್ರಿಕಾ ನೌಕರರಿಗೆ ಕೆಲವು ಅಧಿನಿಯಮಗಳನ್ನು ಅನ್ವಯಿಸುವುದು

14. ವೃತ್ತಪತ್ರಿಕಾ ಸಂಸ್ಥೆಗಳಿಗೆ 1946ರ ಅಧಿನಿಯಮ 20 ಅನ್ವಯಿಸುವುದು:- ತತ್ಕಾಲದಲ್ಲಿ ಜಾರಿಯಲ್ಲಿರುವ ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳ) ಅಧಿನಿಯಮ, 1946ರ ಉಪಬಂಧಗಳನ್ನು, ಹಿಂದಿನ ಹನ್ನೆರಡು ತಿಂಗಳುಗಳಲ್ಲಿಯ ಯಾವುದೇ ದಿನದಂದು ಇಪ್ಪತ್ತು ಅಥವಾ ಅದಕ್ಕೂ ಹೆಚ್ಚು ಮಂದಿ ನೌಕರರನ್ನು ನಿಯೋಜಿಸಿರುವ ಅಥವಾ ನಿಯೋಜಿಸಿದ್ದ ಪ್ರತಿಯೊಂದು ವೃತ್ತಪತ್ರಿಕಾ ಸಂಸ್ಥೆಗೆ, ಅಂಥ ವೃತ್ತಪತ್ರಿಕಾ ಸಂಸ್ಥೆಯು ಒಂದು ಕೈಗಾರಿಕಾ ಸಂಸ್ಥೆಯಾಗಿದ್ದು, ಅದಕ್ಕೆ ಮೇಲೆ ಹೇಳಿದ ಅಧಿನಿಯಮವನ್ನು ಅದರ 1ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗಿನ ಅಧಿಸೂಚನೆಯ ಮೂಲಕ ಅನ್ವಯಿಸಿದ್ದರೆ ಹೇಗೋ ಹಾಗೆ ಮತ್ತು ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ವೃತ್ತಪತ್ರಿಕಾ ನೌಕರನು ಒಬ್ಬ ಕೆಲಸಗಾರನಾಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದು.

15. ವೃತ್ತಪತ್ರಿಕಾ ಸಂಸ್ಥೆಗಳಿಗೆ 1952ರ ಅಧಿನಿಯಮ 19 ಅನ್ವಯಿಸುವುದು:- ತತ್ಕಾಲದಲ್ಲಿ ಜಾರಿಯಲ್ಲಿರುವ ನೌಕರರ ಭವಿಷ್ಯನಿಧಿ (ಮತ್ತು ಸಂಕೀರ್ಣ ಉಪಬಂಧಗಳ) ಅಧಿನಿಯಮ, 1952ನ್ನು ಯಾವುದೇ ದಿನದಂದು ಇಪ್ಪತ್ತು ಅಥವಾ ಅದಕ್ಕೂ ಹೆಚ್ಚು ಮಂದಿಯನ್ನು ನಿಯೋಜಿಸಿಕೊಂಡಿರುವ ಪ್ರತಿಯೊಂದು ವೃತ್ತಪತ್ರಿಕಾ ಸಂಸ್ಥೆಗೆ, ಅದು ಒಂದು ಕಾರ್ಖಾನೆಯಾಗಿದ್ದು

ಅದಕ್ಕೆ ಮೇಲೆ ಹೇಳಿದ ಅಧಿನಿಯಮವನ್ನು ಅದರ 1ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದ ಒಂದು ಅಧಿಸೂಚನೆಯ ಮೂಲಕ ಅನ್ವಯಿಸಿದ್ದರೆ ಹೇಗೋ ಹಾಗೆ ಮತ್ತು ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ವೃತ್ತಪತ್ರಿಕಾ ನೌಕರನು ಒಬ್ಬ ನೌಕರನಾಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದು.

## ಅಧ್ಯಾಯ-IV

### ಸಂಕೀರ್ಣ

16. ಈ ಅಧಿನಿಯಮದೊಂದಿಗೆ ಅಸಂಗತವಾದ ಕಾನೂನುಗಳ ಮತ್ತು ಒಪ್ಪಂದಗಳ ಪರಿಣಾಮ:- (1) ಯಾವುದೇ ಇತರ ಕಾನೂನಿನಲ್ಲಿ ಅಥವಾ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲಾಗಲೀ ಅಥವಾ ತರುವಾಯವಾಗಲಿ ಮಾಡಲಾದ ಐತೀರ್ಪು, ಒಪ್ಪಂದ ಅಥವಾ ಸೇವಾ ಕರಾರುಗಳ ನಿಬಂಧನೆಗಳಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾದುದು ಏನೇ ಇದ್ದರೂ ಸದರಿ ಉಪಬಂಧಗಳು ಪರಿಣಾಮಕಾರಿಯಾಗತಕ್ಕದ್ದು:

ಪರಂತು, ಯಾವುದೇ ಅಂಥ ಐತೀರ್ಪು, ಒಪ್ಪಂದ, ಸೇವಾ ಕರಾರಿನ ಮೇರೆಗೆ ಅಥವಾ ಅನ್ಯಥಾ ಒಬ್ಬ ವೃತ್ತಪತ್ರಿಕಾ ನೌಕರನು ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗೆ ಅವನು ಹಕ್ಕುಳ್ಳವನಾಗಬಹುದಾದ ಪ್ರಯೋಜನಗಳಿಗಿಂತ ಹೆಚ್ಚು ಅನುಕೂಲಕರವಾಗಿರುವ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳವನಾಗಿದ್ದರೆ ಆ ವೃತ್ತಪತ್ರಿಕಾ ನೌಕರನು, ಈ ಅಧಿನಿಯಮದ ಮೇರೆಗೆ ಇತರ ವಿಷಯಗಳ ಸಂಬಂಧದಲ್ಲಿ ಅವನು ಸ್ವೀಕರಿಸುವ ಪ್ರಯೋಜನಗಳೇನೇ ಇದ್ದರೂ, ಆ ವಿಷಯಕ್ಕೆ ಸಂಬಂಧಪಟ್ಟಂತೆ ಹೆಚ್ಚು ಅನುಕೂಲಕರ ಪ್ರಯೋಜನಗಳನ್ನು ಪಡೆಯಲು ಅವನು ಹೊಂದಿರತಕ್ಕ ಹಕ್ಕು ಮುಂದುವರೆಯತಕ್ಕದ್ದು.

(2) ಯಾರೇ ವೃತ್ತಪತ್ರಿಕಾ ನೌಕರನು ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗೆ ಅವನು ಹಕ್ಕುಳ್ಳವನಾಗಬಹುದಾದ ಹಕ್ಕುಗಳು ಅಥವಾ ವಿಶೇಷಾಧಿಕಾರಗಳಿಗಿಂತ ಹೆಚ್ಚು ಅನುಕೂಲಕರವಾದ ಹಕ್ಕುಗಳು ಅಥವಾ ವಿಶೇಷಾಧಿಕಾರಗಳನ್ನು ತನಗೆ ನೀಡಲು ನಿಯೋಜಕನೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳುವುದಕ್ಕೆ ಈ ಅಧಿನಿಯಮದಲ್ಲಿ ಇರುವುದಾವುದೂ ಅಡ್ಡಿಪಡಿಸುವುದೆಂದು ಅರ್ಥೈಸತಕ್ಕದ್ದಲ್ಲ.

16ಎ. ನಿಯೋಜಕನು ವೃತ್ತಪತ್ರಿಕಾ ನೌಕರರನ್ನು ವಜಾ ಮಾಡದಿರುವುದು, ತೆಗೆದುಹಾಕದಿರುವುದು ಇತ್ಯಾದಿ:- ಒಂದು ವೃತ್ತಪತ್ರಿಕಾ ಸಂಸ್ಥೆಗೆ ಸಂಬಂಧಪಟ್ಟಂಥ ಯಾರೇ ನಿಯೋಜಕನು, ವೃತ್ತಪತ್ರಿಕಾ ನೌಕರರಿಗೆ 12ನೇ ಪ್ರಕರಣದ ಮೇರೆಗೆ ಅಥವಾ 13ಎಎ ಪ್ರಕರಣದೊಂದಿಗೆ ಅಥವಾ 13ಡಿಡಿ ಪ್ರಕರಣದೊಂದಿಗೆ ಓದಿಕೊಂಡ 12ನೇ ಪ್ರಕರಣದ ಮೇರೆಗಿನ ಕೇಂದ್ರ ಸರ್ಕಾರದ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ದರಗಳಲ್ಲಿ ಮಜೂರಿ ಸಂದಾಯಮಾಡುವ ತನ್ನ ಹೊಣೆಗಾರಿಕೆಯ ಕಾರಣದಿಂದಾಗಿ ಯಾರೇ ವೃತ್ತಪತ್ರಿಕಾ ನೌಕರನನ್ನು ಕೆಲಸದಿಂದ ವಜಾ ಮಾಡತಕ್ಕದ್ದಲ್ಲ, ಬಿಡುಗಡೆ ಮಾಡತಕ್ಕದ್ದಲ್ಲ ಅಥವಾ ಸೇವೆಯಿಂದ ತೆಗೆದುಹಾಕತಕ್ಕದ್ದಲ್ಲ.

17. ನಿಯೋಜಕನಿಂದ ಬರಬೇಕಾದ ಬಾಕಿ ಹಣದ ವಸೂಲಿ :- (1) ಈ ಅಧಿನಿಯಮದ ಮೇರೆಗೆ ವೃತ್ತಪತ್ರಿಕಾ ನೌಕರನಿಗೆ ನಿಯೋಜಕನಿಂದ ಹಣವೇನಾದರೂ ಬಾಕಿ ಇದ್ದರೆ, ಆ ವೃತ್ತಪತ್ರಿಕಾ ನೌಕರನು ಸ್ವತಃ ತಾನೇ ಅಥವಾ ಈ ಸಂಬಂಧದಲ್ಲಿ ಅವನಿಂದ ಲಿಖಿತದಲ್ಲಿ ಅಧಿಕಾರ ಪಡೆದ ಯಾರೇ ವ್ಯಕ್ತಿಯು ಅಥವಾ ಆ ನೌಕರನು ಮೃತನಾದ ಸಂದರ್ಭದಲ್ಲಿ, ಅವನ ಕುಟುಂಬದ ಯಾರೆ ಸದಸ್ಯನು ವಸೂಲಿಯ ಇತರ ಯಾವುದೇ ರೀತಿಗೆ ಬಾಧಕವಾಗದಂತೆ, ತನಗೆ ಬರಬೇಕಾದ ಬಾಕಿ ಹಣದ ವಸೂಲಿಗಾಗಿ ರಾಜ್ಯ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ರಾಜ್ಯ ಸರ್ಕಾರಕ್ಕೆ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಕ್ಕೆ ಹಾಗೆ ಯಾವುದೇ ಹಣವು ಬಾಕಿ ಉಳಿದಿದೆಯೆಂದು ಮನವರಿಕೆಯಾದರೆ ಅದು ಆ ಮೊಬಲಗಿನ ಸಲುವಾಗಿ ಕಲೆಕ್ಟರನಿಗೆ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಆ ಕಲೆಕ್ಟರನು ಭೂಕಂದಾಯದ ಬಾಕಿ ವಸೂಲಿ ಮಾಡುವ ರೀತಿಯಲ್ಲಿಯೇ ಆ ಮೊಬಲಗನ್ನು ವಸೂಲ್ಮಾಡಲು ಕ್ರಮ ತೆಗೆದುಕೊಳ್ಳತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಒಬ್ಬ ವೃತ್ತಪತ್ರಿಕಾ ನೌಕರನಿಗೆ ತನ್ನ ನಿಯೋಜಕನಿಂದ ಬರಬೇಕಾದ ಬಾಕಿ ಮೊಬಲಗಿನ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದಲ್ಲಿ ರಾಜ್ಯ ಸರ್ಕಾರವು, ತಾನಾಗಿಯೇ ಅಥವಾ ತನಗೆ ಸಲ್ಲಿಸಲಾದ ಅರ್ಜಿಯ ಮೇಲೆ ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) ಅಥವಾ ರಾಜ್ಯದಲ್ಲಿ ಜಾರಿಯಲ್ಲಿರುವ ಕೈಗಾರಿಕಾ ವಿವಾದಗಳ ತನಿಖೆ ಹಾಗೂ ಇತ್ಯರ್ಥಕ್ಕೆ ಸಂಬಂಧಪಟ್ಟ ಯಾವುವೆ ಸಂವಾದಿ ಕಾನೂನಿನ ಮೇರೆಗೆ ರಚಿತವಾದ ಯಾವುದೇ ಕಾರ್ಮಿಕ ನ್ಯಾಯಾಲಯಕ್ಕೆ ಆ ಪ್ರಶ್ನೆಯನ್ನು ಅಭಿಪ್ರಾಯ ಕೋರಿ ಕಳುಹಿಸಬಹುದು ಮತ್ತು ಹಾಗೆ ಕಳುಹಿಸಲಾದ ಪ್ರಶ್ನೆಯು ಆ ಅಧಿನಿಯಮ ಅಥವಾ ಕಾನೂನಿನ ಮೇರೆಗೆ ನ್ಯಾಯ ನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯಕ್ಕೆ ಕಳುಹಿಸಲಾದ ವಿಷಯವಾಗಿದ್ದರೆ ಹೇಗೋ ಹಾಗೆ ಕಾರ್ಮಿಕ ನ್ಯಾಯಾಲಯಕ್ಕೆ ಸಂಬಂಧಪಟ್ಟಂತೆ ಸದರಿ ಅಧಿನಿಯಮವು ಅಥವಾ ಕಾನೂನು ಪರಿಣಾಮ ಹೊಂದಿರತಕ್ಕದ್ದು.

(3) ಕಾರ್ಮಿಕ ನ್ಯಾಯಾಲಯವು ತನ್ನ ತೀರ್ಮಾನವನ್ನು ಅಭಿಪ್ರಾಯ ಕೋರಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಸಂದಾಯವಾಗಬೇಕಾದ ಯಾವುದಾದರೂ ಮೊಬಲಗು ಬಾಕಿ ಉಳಿದಿಯೆಂದು ಕಾರ್ಮಿಕ ನ್ಯಾಯಾಲಯಕ್ಕೆ ಕಂಡುಬಂದಲ್ಲಿ ಅದನ್ನು (1)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ವಸೂಲ್ಮಾಡಬಹುದು.

17ಎ. ರಿಜಿಸ್ಟರುಗಳು, ದಾಖಲೆಗಳು ಮತ್ತು ಹಾಜರಿ ಪಟ್ಟಿಗಳನ್ನು ನಿರ್ವಹಿಸುವುದು:- ಒಂದು ವೃತ್ತಪತ್ರಿಕಾ ಸಂಸ್ಥೆಗೆ ಸಂಬಂಧಪಟ್ಟಂತೆ ಪ್ರತಿಯೊಬ್ಬ ನಿಯೋಜಕನು ನಿಯಮಿಸಬಹುದಾದಂತಹ ರೀತಿಯಲ್ಲಿ ರಿಜಿಸ್ಟರುಗಳನ್ನು, ದಾಖಲೆಗಳನ್ನು ಹಾಗೂ ಹಾಜರಿ ಪಟ್ಟಿಗಳನ್ನು ಸಿದ್ಧಪಡಿಸಿ ಅವುಗಳನ್ನು ನಿರ್ವಹಿಸತಕ್ಕದ್ದು.

17ಬಿ. ಪರಿವೀಕ್ಷಕರು:- (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ಪರಿವೀಕ್ಷಕರಾಗಿರಲು ಸೂಕ್ತವೆಂದು ತಾನು ಆಲೋಚಿಸುವಂಥ ವ್ಯಕ್ತಿಗಳನ್ನು ನಿಯೋಜಿಸಬಹುದು ಮತ್ತು ಅವರು ತಮ್ಮ ಕರ್ತವ್ಯಗಳನ್ನು ಚಲಾಯಿಸತಕ್ಕ ಸ್ಥಳೀಯ ಪರಿಮಿತಿಗಳನ್ನು ನಿರ್ಧರಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಯಾರೇ ಪರಿವೀಕ್ಷಕನು ಒಂದು ವೃತ್ತಪತ್ರಿಕಾ ಸಂಸ್ಥೆಗೆ ಸಂಬಂಧಪಟ್ಟಂತೆ, ಈ ಅಧಿನಿಯಮದ ಅಥವಾ ಕಾರ್ಯನಿರತ ಪತ್ರಕರ್ತರ (ಮಜೂರಿ ದರಗಳ ನಿಗದಿಪಡಿಸುವಿಕೆ) ಅಧಿನಿಯಮ, 1958ರ (1958ರ 29) ಯಾವುವೇ ಉಪಬಂಧಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ,-

(ಎ) ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ಮಾಹಿತಿಯನ್ನು ಒದಗಿಸಲು ನಿಯೋಜಕನನ್ನು ಅಗತ್ಯಪಡಿಸಬಹುದು;

(ಬಿ) ಯಾವುದೇ ಯುಕ್ತ ಸಮಯದಲ್ಲಿ ಯಾವುದೇ ವೃತ್ತಪತ್ರಿಕಾ ಸಂಸ್ಥೆಯೊಳಗೆ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ಆವರಣದೊಳಗೆ ಪ್ರವೇಶಿಸಬಹುದು ಮತ್ತು ಅದರ ಪ್ರಭಾರದಲ್ಲಿ ಕಂಡುಬರುವ ಯಾರನ್ನಾದರೂ ಆ ಸಂಸ್ಥೆಯಲ್ಲಿನ ನಿಯೋಜನೆಗೆ ಅಥವಾ ಆ ಸಂಸ್ಥೆಯಲ್ಲಿ ಮಜೂರಿ ಸಂದಾಯಕ್ಕೆ ಸಂಬಂಧಪಟ್ಟ ಯಾವುವೇ ಲೆಕ್ಕಪತ್ರಗಳು, ಪುಸ್ತಕಗಳು, ರಿಜಿಸ್ಟರುಗಳು ಮತ್ತು ಇತರ ದಸ್ತಾವೇಜುಗಳು -ಇವುಗಳನ್ನು ಪರಿಶೀಲನೆಗಾಗಿ ತನ್ನ ಮುಂದೆ ಹಾಜರುಪಡಿಸಬೇಕೆಂದು ಅಗತ್ಯಪಡಿಸಬಹುದು;

(ಸಿ) ನಿಯೋಜಕ, ಅವನ ಏಜೆಂಟ್ ಅಥವಾ ಸೇವಕನನ್ನು ಅಥವಾ ಆ ವೃತ್ತಪತ್ರಿಕಾ ಸಂಸ್ಥೆಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಆವರಣದ ಪ್ರಭಾರದಲ್ಲಿರುವವನೆಂದು ಕಂಡುಬಂದಂಥ ಯಾರೇ ಇತರ ವ್ಯಕ್ತಿಯನ್ನು ಅಥವಾ ಆ ಸಂಸ್ಥೆಯ ನೌಕರನಾಗಿರುವನೆಂದು ಅಥವಾ ನೌಕರನಾಗಿದ್ದನೆಂದು ಪರಿವೀಕ್ಷಕನಿಗೆ ನಂಬಲು ಸೂಕ್ತ ಕಾರಣವಿರುವ ಯಾರೇ ವ್ಯಕ್ತಿಯನ್ನು ಮೇಲೆ ಹೇಳಿದ ಯಾವುದೇ ಉದ್ದೇಶಕ್ಕೆ ಸುಸಂಬದ್ಧವೆನಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಪರೀಕ್ಷಿಸಬಹುದು;

(ಡಿ) ವೃತ್ತಪತ್ರಿಕಾ ಸಂಸ್ಥೆಗೆ ಸಂಬಂಧಪಟ್ಟಂತೆ ಇಟ್ಟಿರುವ ಯಾವುವೇ ಪುಸ್ತಕ, ರಿಜಿಸ್ಟರು ಅಥವಾ ಇತರ ದಸ್ತಾವೇಜುಗಳ ಯಥಾ ಪ್ರತಿಗಳನ್ನು ಮಾಡಿ ಕೊಳ್ಳಬಹುದು ಅಥವಾ ಅದರ ಉದ್ಧೃತಗಳನ್ನು ಪಡೆಯಬಹುದು.

(ಇ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

(3) ಪ್ರತಿಯೊಬ್ಬ ಪರಿವೀಕ್ಷಕನನ್ನು ಭಾರತ ದಂಡ ಸಂಹಿತೆಯ (1960ರ 45)ರ ಅರ್ಥವ್ಯಾಪ್ತಿಯೊಳಗೆ ಒಬ್ಬ ಲೋಕನೌಕರನೆಂದು ಭಾವಿಸತಕ್ಕದ್ದು.

(4) (2)ನೇ ಉಪ-ಪ್ರಕರಣದ ಮೇರೆಗೆ ಪರಿವೀಕ್ಷಕನು ಯಾವುದೇ ದಸ್ತಾವೇಜು ಅಥವಾ ಯಾವುದೇ ವಿಷಯ ಅಥವಾ ಮಾಹಿತಿ ಒದಗಿಸಬೇಕೆಂದು ಅಗತ್ಯಪಡಿಸಲಾದ ಯಾರೇ ವ್ಯಕ್ತಿಯು ಹಾಗೆ ಒದಗಿಸಲು ಕಾನೂನು ರೀತ್ಯ ಬದ್ಧನಾಗಿರತಕ್ಕದ್ದು.

18. ದಂಡ:- (1) ಯಾರೇ ನಿಯೋಜಕನು ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಲಾದ ಯಾವುವೇ ನಿಯಮ ಅಥವಾ ಆದೇಶವನ್ನು ಉಲ್ಲಂಘಿಸಿದರೆ, ಅವನು ಎರಡುನೂರು ರೂಪಾಯಿವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(1ಎ) ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧಕ್ಕಾಗಿ ಅಪರಾಧಿಯೆದು ನಿರ್ಣೀತನಾಗಿರುವ ಯಾರೇ ವ್ಯಕ್ತಿಯು ಅದೇ ಉಪಬಂಧದ ಉಲ್ಲಂಘನೆಯನ್ನು ಒಳಗೊಳ್ಳುವ ಅಪರಾಧಕ್ಕಾಗಿ ಪುನಃ ಅಪರಾಧಿಯೆಂದು ನಿರ್ಣೀತನಾದರೆ ಐದುನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(ಬಿ) ಅಪರಾಧವನ್ನು ಕಂಪನಿಯು ಮಾಡಿದ್ದರೆ, ಅಪರಾಧವನ್ನು ಮಾಡಿದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಸಹ ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಕ್ರಮಕ್ಕೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಅಂಥ ಯಾರೇ ವ್ಯಕ್ತಿಯು, ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ಆಗುವುದನ್ನು ತಡೆಗಟ್ಟಲು ಸೂಕ್ತವಾದ ಎಲ್ಲ ಜಾಗರೂಕತೆಯನ್ನು ತಾನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಈ ಉಪ-ಪ್ರಕರಣದಲ್ಲಿರುವುದು ಯಾವುದೂ ಅವನನ್ನು ಈ ಪ್ರಕರಣದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(1ಸಿ) (1ಬಿ) ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದ್ದರೆ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ಅಥವಾ ಅಂಥ ಅಪರಾಧವು ಅವರ ಯಾವುದೇ ಗುರುತರ ನಿರ್ಲಕ್ಷತೆಯಿಂದಾಗಿ ಆಗಿದೆಯೆಂದು ಆರೋಪಿಸಬಹುದೆಂದು ರುಜುವಾತಾದರೆ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ಕ್ರಮಕ್ಕೆ ಮತ್ತು ದಂಡನೆಗೆ ಗುರಿ ಯಾಗತಕ್ಕದ್ದು.

(1ಡಿ) ಈ ಪ್ರಕರಣದ ಉದ್ದೇಶಗಳಿಗಾಗಿ;

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಆ ಫರ್ಮಿನಲ್ಲಿಯ ಒಬ್ಬ ಪಾಲುದಾರ

(2) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆ ಮ್ಯಾರ್ಜಿಸ್ಟ್ರೇಟನ ನ್ಯಾಯಾಲಯದ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಯಾವ ನ್ಯಾಯಾಲಯವೂ ಈ ಪ್ರಕರಣದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧ ಅಧಿವಿಚಾರಣೆಯನ್ನು ನಡೆಸತಕ್ಕದ್ದಲ್ಲ.

(3) ಅಪರಾಧವು ನಡೆದಿದೆಯೆಂದು ಆಪಾದಿಸಲಾದ ದಿನಾಂಕದಿಂದ ಆರು ತಿಂಗಳ ಒಳಗಾಗಿ ಅದರ ಬಗ್ಗೆ ಯಾವುದೇ ಫಿರ್ಯಾದನ್ನು ಸಲ್ಲಿಸಿದ್ದ ಹೊರತು ಯಾವ ನ್ಯಾಯಾಲಯವೂ ಈ ಪ್ರಕರಣದ ಮೇರೆಗಿನ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

19. ಉನ್ಮುಕ್ತಿ:- ಮಂಡಲಿಯ ಅಧ್ಯಕ್ಷ ಅಥವಾ ಯಾರೇ ಇತರ ಸದಸ್ಯ ಅಥವಾ ನ್ಯಾಯಾಧಿಕರಣವಾಗಿರುವ ವ್ಯಕ್ತಿ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಪರಿವೀಕ್ಷಕ- ಇವರು ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಅವರ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ

19ಎ. ನೇಮಕಾತಿಗಳಲ್ಲಿಯ ದೋಷಗಳಿಂದ ಕೃತ್ಯಗಳು ಅಸಿಂಧುವಾಗದಿರುವುದು:- ಮಂಡಲಿಯಲ್ಲಿ ಯಾವುದೇ ಸ್ಥಾನವು ಖಾಲಿಯಿದೆ ಎಂಬ, ಅಥವಾ ಆ ಮಂಡಲಿಯ ರಚನೆಯಲ್ಲಿ ಯಾವುದೇ ದೋಷವಿರುವುದೆಂಬ ಕಾರಣ ಮಾತ್ರದಿಂದಲೇ ಮಂಡಲಿಯ ಯಾವುದೇ ಕೃತ್ಯ ಅಥವಾ ವ್ಯವಹರಣೆಯನ್ನು ಪ್ರಶ್ನಿಸತಕ್ಕದ್ದಲ್ಲ.

19ಬಿ. ಉಳಿಸುವಿಕೆ:- ಮೂಲಭೂತ ಮತ್ತು ಪೂರಕ ನಿಯಮಗಳು, ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, ಸಿವಿಲ್ ಸೇವೆಗಳ (ತಾತ್ಕಾಲಿಕ ಸೇವೆಗಳು) ನಿಯಮಗಳು, ಪರಿಷ್ಕೃತ ರಜಾ ನಿಯಮಗಳು, ಸಿವಿಲ್ ಸೇವಾ ವಿನಿಯಮಗಳು, ರಕ್ಷಣಾ ಸೇವೆಯಲ್ಲಿ ಸಿವಿಲಿಯನ್ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು ಅಥವಾ ಭಾರತೀಯ ರೈಲ್ವೆ ಸಂಸ್ಥೆ ಸಂಹಿತೆ ಅಥವಾ ಈ ಸಂಬಂಧದಲ್ಲಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಬಹುದಾದ ಯಾವುದೇ ಇತರ ನಿಯಮಗಳು ಅಥವಾ ವಿನಿಯಮಗಳು ಅನ್ವಯಿಸುವ ಸರ್ಕಾರಿ ನೌಕರನಾಗಿರುವ ಯಾರೇ ವೃತ್ತಪತ್ರಿಕಾ ನೌಕರನಿಗೆ, ಈ ಅಧಿನಿಯಮದಲ್ಲಿ ಅಥವಾ ಕಾರ್ಯನಿರತ ಪತ್ರಕರ್ತರ (ಮಜೂರಿ ದರಗಳನ್ನು ನಿಗದಿಪಡಿಸುವಿಕೆ) ಅಧಿನಿಯಮ, 1958 (1958 29) ರಲ್ಲಿ ಇರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ.

20. ನಿಯಮಗಳ ರಚನಾಧಿಕಾರ:- (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು, ಕೇಂದ್ರಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) ಕಾರ್ಯನಿರತ ಪತ್ರಕರ್ತರಿಗೆ ಉಪದಾನದ ಸಂದಾಯ;

(ಬಿ) ಕಾರ್ಯನಿರತ ಪತ್ರಕರ್ತರಿಗೆ ಕೆಲಸದ ಗಂಟೆಗಳು;

(ಸಿ) ಕಾರ್ಯನಿರತ ಪತ್ರಕರ್ತರಿಗೆ ಅನುಮತಿಸಬಹುದಾದ ರಜಾ ದಿನಗಳು, ಗಳಿಕೆ ರಜೆ, ವೈದ್ಯಕೀಯ ಪ್ರಮಾಣ ಪತ್ರದ ಮೇಲೆ ರಜೆ, ಸಾಂದರ್ಭಿಕ ರಜೆ ಅಥವಾ ಇತರ ಯಾವುದೇ ರೀತಿಯ ರಜೆ;

(ಡಿ) ಈ ಅಧಿನಿಯಮದ ಮೇರೆಗೆ ಸಂದರ್ಭಾನುಸಾರ ಮಂಡಲಿ ಅಥವಾ ನ್ಯಾಯಾಧಿಕರಣವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಪ್ರಕ್ರಿಯೆ;

(ಇ) ನಾಮನಿರ್ದೇಶನಗಳ ನಮೂನೆ ಮತ್ತು ಮಾಡಬಹುದಾದ ರೀತಿ;

(ಎಫ್) 5ಎ ಪ್ರಕರಣದ (3)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ ಯಾರೇ ವ್ಯಕ್ತಿಯನ್ನು ನೇಮಿಸಬಹುದಾದ ರೀತಿ;

(ಜಿ) ನಾಮನಿರ್ದೇಶನವನ್ನು ಬದಲಾಯಿಸುವುದು ಅಥವಾ ರದ್ದುಗೊಳಿಸುವುದು;

(ಎಚ್) 12ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ನೋಟೀಸು ಕೊಡುವ ರೀತಿ;

(ಐ) ವೃತ್ತಪತ್ರಿಕಾ ಸಂಸ್ಥೆಗಳು ಸಿದ್ಧಪಡಿಸಬೇಕಾದ ಮತ್ತು ನಿರ್ವಹಿಸಬೇಕಾದ ರಿಜಿಸ್ಟರು, ದಾಖಲೆ ಮತ್ತು ಹಾಜರಾತಿ ಪುಸ್ತಕ-ಇವುಗಳನ್ನು ಸಿದ್ಧಪಡಿಸಬೇಕಾದ ಮತ್ತು ನಿರ್ವಹಿಸಬೇಕಾದ ನಮೂನೆಗಳು ಮತ್ತು ಅವುಗಳಲ್ಲಿ ನಮೂದಿಸಬೇಕಾದ ವಿವರಗಳು;

(ಜೆ) ಒಬ್ಬ ಪರಿವೀಕ್ಷಕನು ಚಲಾಯಿಸಬಹುದಾದ ಅಧಿಕಾರಗಳು;

(ಕೆ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು, ಮತ್ತು ಮೇಲೆ ಹೇಳಿದ ಅಧಿವೇಶನದ ನಿಕಟ ತರುವಾಯದ ಅಧಿವೇಶನ ಅಥವಾ ಅನುಕ್ರಮ ಅಧಿವೇಶನಗಳು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

21. 1955ರ ಅಧಿನಿಯಮ 1ರ ನಿರಸನ- ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ 1960, (1960ರ 58)ರ ಪ್ರಕರಣ 2 ಮತ್ತು ಅನುಸೂಚಿ-1ರ ಮೂಲಕ ನಿರಸನಗೊಳಿಸಲಾಗಿದೆ.

## ಅನುಸೂಚಿ

2 (ಡಿ) ಪ್ರಕರಣವನ್ನು ನೋಡಿ

1. 2ನೇ ಪ್ರಕರಣದ (ಡಿ) ಖಂಡದ ಉದ್ದೇಶಗಳಿಗಾಗಿ

(1) ಸಾಮಾನ್ಯ ನಿಯಂತ್ರಣದಲ್ಲಿರುವ ಎರಡು ಅಥವಾ ಅದಕ್ಕೂ ಹೆಚ್ಚು ವೃತ್ತಪತ್ರಿಕಾ ಸಂಸ್ಥೆಗಳನ್ನು ಒಂದು ವೃತ್ತಪತ್ರಿಕಾ ಸಂಸ್ಥೆಯೆಂದು ಭಾವಿಸತಕ್ಕದ್ದು;

(2) ವ್ಯಕ್ತಿಯು ಮತ್ತು ಆತನ ಹೆಂಡತಿಯು ಅಥವಾ ಆಕೆಯ ಗಂಡನು ಮಾಲೀಕ ಆಗಿರುವ ಎರಡು ಅಥವಾ ಅದಕ್ಕೂ ಹೆಚ್ಚು ವೃತ್ತಪತ್ರಿಕಾ ಸಂಸ್ಥೆಗಳನ್ನು, ಆತನ ಅಥವಾ ಆಕೆಯ ಸ್ವಂತ ವೈಯಕ್ತಿಕ ನಿಧಿಗಳ ಆಧಾರದ ಮೇಲೆ, ಆತನು ಅಥವಾ ಆಕೆಯು ನಿಗಮಿತ ನಿಕಾಯದ ಏಕಮಾತ್ರ ಮಾಲೀಕ ಆಗಿದ್ದಾರೆಂದು ಅಥವಾ ಪಾಲುದಾರ ಆಗಿದ್ದಾರೆಂದು ಅಥವಾ ಷೇರುದಾರ ಆಗಿದ್ದಾರೆಂದು ರುಜುವಾತುಪಡಿಸಿದ ಹೊರತು, ಒಂದೇ ವೃತ್ತಪತ್ರಿಕಾ ಸಂಸ್ಥೆಯೆಂದು ಭಾವಿಸತಕ್ಕದ್ದು;

(3) ಅದೇ, ಅಥವಾ ಅದನ್ನೇ ಹೋಲುವ ಶಿರೋನಾಮವನ್ನು ಹೊಂದಿರುವ ಮತ್ತು ಭಾರತದ ಯಾವುದೇ ಸ್ಥಳದಲ್ಲಿ, ಅದೇ ಭಾಷೆಯ ಅಥವಾ ಅದೇ, ಅಥವಾ ಅದನ್ನೇ ಹೋಲುವ ಶಿರೋನಾಮವನ್ನು ಹೊಂದಿರುವ, ಆದರೆ, ಅದೇ ರಾಜ್ಯದಲ್ಲಿನ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿನ ವಿವಿಧ ಭಾಷೆಗಳ ವೃತ್ತಪತ್ರಿಕೆಗಳನ್ನು ಪ್ರಕಟಿಸುವ ಎರಡು ಅಥವಾ ಅದಕ್ಕಿಂತ ಹೆಚ್ಚು ವೃತ್ತಪತ್ರಿಕಾ ಸಂಸ್ಥೆಗಳನ್ನು ಒಂದು ವೃತ್ತಪತ್ರಿಕಾ ಸಂಸ್ಥೆಯೆಂದು ಭಾವಿಸತಕ್ಕದ್ದು.

2. 1 (1) ನೇ ಪ್ಯಾರಾಗ್ರಾಫ್‌ನ ಉದ್ದೇಶಗಳಿಗಾಗಿ ಎರಡು ಅಥವಾ ಅದಕ್ಕೂ ಹೆಚ್ಚು ಸಂಸ್ಥೆಗಳು,-

(ಎ) (i) ಒಬ್ಬ ಸಾಮಾನ್ಯ ವ್ಯಕ್ತಿಯು ಅಥವಾ ವ್ಯಕ್ತಿಗಳು ಆ ವೃತ್ತಪತ್ರಿಕಾ ಸಂಸ್ಥೆಗಳ ಒಡೆಯರಾಗಿದ್ದರೆ;

(ii) ಫರ್ಮುಗಳು ಆ ವೃತ್ತಪತ್ರಿಕಾ ಸಂಸ್ಥೆಗಳ ಒಡೆಯರಾಗಿದ್ದರೆ, ಅಂಥ ಫರ್ಮುಗಳು ಗಣನೀಯ ಸಂಖ್ಯೆಯ ಪಾಲುದಾರರನ್ನು ಹೊಂದಿದ್ದರೆ;

(iii) ನಿಗಮಿತ ನಿಕಾಯಗಳು, ಒಂದು ನಿಗಮಿತ ನಿಕಾಯವು ಇನ್ನೊಂದು ನಿಗಮಿತ ನಿಕಾಯದ ಸಹಾಯಕ ಸಂಸ್ಥೆಯಾಗಿದ್ದರೆ, ಅಥವಾ ಆ ಎರಡೂ ಕೂಡ, ಸಾಮಾನ್ಯ ನಿರ್ವಾಹಕ ಕಂಪನಿಯ ಸಹಾಯಕ ಸಂಸ್ಥೆಗಳಾಗಿದ್ದರೆ, ಅಥವಾ ನಿಗಮಿತವಾಗಿರಲಿ ಅಥವಾ ಆಗದಿರಲಿ, ಅದೇ ವ್ಯಕ್ತಿಯು ಅಥವಾ ವ್ಯಕ್ತಿಗಳ ಗುಂಪು ಅವುಗಳಲ್ಲಿ ಗಣನೀಯ ಸಂಖ್ಯೆಯ ಈಕ್ವಟಿ ಷೇರುಗಳನ್ನು ಹೊಂದಿದ್ದು, ವೃತ್ತಪತ್ರಿಕಾ ಸಂಸ್ಥೆಗಳ ಒಡೆಯ ಆಗಿದ್ದರೆ;

(iv) ಒಂದು ಸಂಸ್ಥೆಯು ನಿಗಮಿತ ನಿಕಾಯದ ಒಡೆತನದಲ್ಲಿದ್ದು, ಇನ್ನೊಂದು ಸಂಸ್ಥೆಯು ಫರ್ಮಿನ ಒಡೆತನದಲ್ಲಿದ್ದು ಆ ಫರ್ಮಿನ ಗಣನೀಯ ಸಂಖ್ಯೆಯ ಪಾಲುದಾರರು ನಿಗಮಿತ ನಿಕಾಯದ ಗಣನೀಯ ಸಂಖ್ಯೆಯ ಈಕ್ವಟಿ ಷೇರುಗಳನ್ನು ಒಟ್ಟಿಗೆ ಹೊಂದಿದ್ದರೆ;

(v) ಒಂದು ಸಂಸ್ಥೆಯು ನಿಗಮಿತ ನಿಕಾಯದ ಒಡೆತನದಲ್ಲಿದ್ದು ಮತ್ತು ಇನ್ನೊಂದು ಸಂಸ್ಥೆಯು ನಿಗಮಿತ ನಿಕಾಯಗಳನ್ನು ಪಾಲುದಾರರನ್ನಾಗಿ ಹೊಂದಿರುವಂತಹ ಫರ್ಮಿನ ಒಡೆತನದಲ್ಲಿದ್ದು, ಅಂಥ ನಿಗಮಿತ ನಿಕಾಯಗಳ ಗಣನೀಯ ಸಂಖ್ಯೆಯ ಈಕ್ವಿಟಿ ಷೇರುಗಳನ್ನು ಅದೇ ವ್ಯಕ್ತಿಯು ಅಥವಾ ವ್ಯಕ್ತಿಗಳ ಗುಂಪು, ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹೊಂದಿದ್ದರೆ, ಅಥವಾ

(ಬಿ) ಸಂಬಂಧಪಟ್ಟ ವೃತ್ತಪತ್ರಿಕಾ ಸಂಸ್ಥೆಗಳ ನಡುವೆ ಕಾರ್ಯವು ಸಮಗ್ರವಾಗಿದ್ದರೆ

-ಸಾಮಾನ್ಯ ನಿಯಂತ್ರಣದಲ್ಲಿ ಇರುತ್ತವೆಂದು ಭಾವಿಸತಕ್ಕದ್ದು.

* * * * *

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು. ಕಾ.ಸೂ. 2981 / ಎಲ್‌ಎ - ಪಿ2